
ಅಪರಂಜಿ

ತಿಳಿನಗೆಯ ಕಾರಂಜಿ



☐ ಆನಂದ್ ☐ ಕೇಫ ☐ ಡಾ॥ ಪರಡ್ಡಿ ಮಲ್ಲಿಕಾರ್ಜುನ

☐ ಶೀನೂ ☐ ಲೀಲಾಮಿರ್ಲೆ

☐ ಭುವನೇಶ್ವರಿ ಹೆಗಡೆ ☐ ಅಶ್ವಥ್–ಸೂರಿ

ಬಿಡಿಪ್ರತಿ :
ಕೇವಲ ಒಂದು ರೂಪಾಯಿ

ಸಂಪುಟ–೨
ಸಂಚಿಕೆ–೮
ಮೇ 85

ಅಪರಂಜಿ

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ ರೂ. 15–00

ಈ ಸಂಚಿಕೆಯಲ್ಲಿ

ವ್ಯಂಗ್ಯ ಚಿತ್ರಗಳು : ಅಶ್ವತ್ಥ್—ಸೂರಿ

ಮುದ್ರಣ ; ಇಂಪ್ರೆಷನ್ಸ್, ಮಲ್ಲೇಶ್ವರಂ,

ದೂರವಾಣಿ : 36 29 89

36 34 44



ಸಂಪುಟ—೨ ಮೇ ೧೯೮೫ ಸಂಚಿಕೆ—೮

ಆದರ ಕೈಕಾಲುಗಳು ಎಲ್ಲೆಡೆಯಲ್ಲೂ ಇವೆ. ಆದರ ಕಣ್ಣುಗಳು, ತಲೆ, ಮುಖಗಳು ಎಲ್ಲ ಕಡೆಯಲ್ಲೂ ಇವೆ, ಆದರ ಕಿವಿಗಳು ಸರ್ವತ್ರ ಇವೆ. ಅದು ಎಲ್ಲವನ್ನೂ ಆವರಿಸಿದೆ. ಗೀತಾ ೧೩–೧೩

ಈ ವರ್ಷದ ಎರಡು ಆರಂಭಗಳು ಆದವು: ಎರಡು ಆಯ ವ್ಯಯಗಳು ಹೊರಬಿದ್ದವು. ಭಾರತ ಇಬ್ಬರು ನಾಯಕರ ನೇತೃತ್ವದಲ್ಲಿ ಎರಡು ಕ್ರಿಕೆಟ್ ಕಪ್ಪುಗಳನ್ನು ಗೆದ್ದಿತು. ಲೋಕ ಇಬ್ಬಂದಿತನಕ್ಕೊಳಗಾಗಿದೆಯೇನೋ !

ಈ ಗೀತೆಯ ಶ್ಲೋಕದಲ್ಲಿ ಹೇಳಿರುವುದು ಪರಬ್ರಹ್ಮದ ಲಕ್ಷಣ. ಆದರೆ ಭ್ರಷ್ಟಾಚಾರ, ಅವನತಿ, ಅನೀತಿ, ಕಪ್ಪುಹಣ, ಅತೃಪ್ತಿ. ಹಿಂಸೆ ಇಂತಹ ಹಲವು ಅಪಮೌಲ್ಯಗಳಿಗೂ ಇಂದಿನ ಆಧುನಿಕ ಜೀವನದಲ್ಲಿ ಇದು ಅನ್ವಯಿಸುತ್ತದೆ. ಸುಡು ಬೇಸಗೆಯ ಧಗೆ, ಅತಿವೃಷ್ಟಿ, ಅನಾವೃಷ್ಟಿಗಳಿಗೂ ಅನ್ವಯಿಸುತ್ತದೆ.

ಅಪರಂಜಿ ಹೇಳುತ್ತಾಳೆ. ಇದರ ನಡುವೆಯೇ ಅಲ್ಲವೇ, ಶಿಷ್ಟಾಚಾರಕ್ಕೆ ಎಂದೋ ಒಮ್ಮೆ ಬೆಲೆ ಸಿಗುವುದು ? ಅಪರಂಜಿಯನ್ನು ಆದರಿಸುವ ಜನರ ಸಂಖ್ಯೆ ಏರುತ್ತಿದೆಯಲ್ಲಾ !

ಅಪರಂಜಿ ಕಿಡಿ

—ಆನಂದ್

ಮಾಸ್ಕೋ ಭೇಟಿಯ ನಂತರ ನಿಶ್ಶಸ್ತ್ರೀಕರಣದ ಮಾತುಕತೆ ಬಗ್ಗೆ ರಾಜೀವ್ ಹೇಳಿಕೆ : ಎಲ್ಲವೂ ಸರಿಯಾದ ದಿಕ್ಕಿನಲ್ಲಿ ಚಲಿಸುತ್ತಿವೆ ಎಂಬ ಆಶಯ ನಮಗಿದೆ.

ಎಲ್ಲವೂ ಅಂದರೆ ಕ್ಷಿಪಣಿಗಳೂ ಸೇರಿವೆಯೋ ?

*　　*　　*　　*

ವಿಜಯನಗರದ ಕಾರ್ಖಾನೆ ಬಗ್ಗೆ ಸಂದೇಹ ನಿವಾರಿಸಿ

—ಕೇಂದ್ರಕ್ಕೆ ಶ್ರೀ ಹೆಗ್ಗಡೆ ಆಗ್ರಹ

ಪಾಪ, ಕೇಂದ್ರಕ್ಕೆ ಸಂದೇಹವೇ ಇಲ್ಲವೇನೋ ?

*　　*　　*　　*

ಹುಬ್ಬಳ್ಳಿಗೆ ನುಗ್ಗಿದ ಚಿರತೆ ಹತ್ಯೆ

—ಸುದ್ದಿ

ಪಾಪ, ನಾಗರೀಕತೆಯ ಕತೆ ಅದಕ್ಕೆ ಗೊತ್ತಿರಲಿಲ್ಲ !

*　　*　　*　　*

ವರದಕ್ಷಿಣೆ ಸಮಸ್ಯೆಗೆ ಮಹಿಳೆಯೇ ಕಾರಣ

—ಮಹಿಳಾ ಸಮಿತಿ

ಅರೆ, ನಮಗಿದು ಹೊಳೆದೇ ಇರಲಿಲ್ಲವಲ್ಲ !

*　　*　　*　　*

ಅರ್ಥಪೂರ್ಣ ಬದುಕಿಗೆ ಪ್ರೊ. ಗೋಕಾಕ್ ಕರೆ

—ಪತ್ರಿಕೆ

ವರಮಾನ ತೆರಿಗೆಯವರು ಬಿಡಬೇಕಲ್ಲ !

*　　*　　*　　*

ಯಾತ್ರಿಕರ ಪತ್ರ

" ಶೀಫ "

ಕಂಚಿನಾಳಾ ತ್ರಿಲೋಕೇಶ್ವರನ ಪ್ರಸಾದ ನಮ್ಮನ್ನು ಸುಮಾರು ಇಪ್ಪತ್ತೈದು ಕಿಲೋಮೀಟರ್ ದೂರದವರೆವಿಗೆ ಸಾಗಿಸಿತು. ಮುಂಡುಗನಸರ ತಲ್ಪೋ ಹೊತ್ತಿಗೆ ಹೊಟ್ಟೆಗಳು ಖಾಲಿಯಾಗಿ ಆಹಾರ ಪಾನೀಯಕ್ಕಾಗಿ ಬಾಯಿ ಬಾಯಿ (ಜೋಕಲ್ಲ) ಬಿಡುತ್ತಿದ್ದೆವು.

"ರಾಜ–ನಿಂಗೇನು ಪಶಿಗಿಶಿ ಇಲ್ಲೇನೊ ?" ಅಂತ ಕೇಳಿದ ಚಂದಿ.

ತಮಿಳು ಸಿನಿಮಾ–'ಪಶಿ' ನೋಡಿದ ಮೇಲೆ ಹಸಿವಿಗೆ ಪಶಿ ಪ್ರಯೋಗ ಮಾಡ್ತಾನೆ ಚಂದಿ. ಅದನ್ನ ಕೇಳಿದಾಗಲೆಲ್ಲಾ ಹಸಿವು ಇಮ್ಮಡಿಸುತ್ತೆ ನಂಗೆ.

"ಯಾಕೋ ಹಾಗ್ಯೇಳ್ತಿ ? ನಾನೇನು ನಮ್ಮ ಲೀಡರ್ ಹಾಗೆ ಗುಡೀ ಅಡಿಗೆ ಮನೆಗೆ ನುಗ್ಗಿ ಮೊದಲೇ ಮೂರು ಮುದ್ದೆ ಪ್ರಸಾದ ಗದಿಕಿದ್ನೇನೋ ? ಅಂದ ರಾಜ.

ಈ ಮುಟ್ಠಾಳರು ನನಗೆ ಕೊಟ್ಟ ಪ್ರೈಜಿದು !

ನಾನು ಸುಮ್ಮ ನಿದ್ದೆ.

ಮುಂಡುಗನಸರ–ಒಂದು ಚಿಕ್ಕ ಹಳ್ಳಿ. ಇಪ್ಪತ್ತಾರು ಮನೆಗಳಿವೆ. ಊರು ದೇವರು ಶೃಂಗೇಶ್ವರ. ಗುಡಿ–ಅಂಥಾ ದೊಡ್ಡದಲ್ಲ, ಯಾರೂ ಅದಕ್ಕೆ ಯಾಪ ಬಳುವಳೀನ್ನೂ ಬಿಟ್ಟು ಹೋಗಿಲ್ಲ. ಹಾಗಾಗಿ ಶೃಂಗೇಶ್ವರನಿಗೆ ಯಾವ ಹಸ್ತ ಗುಣವೂ ಇಲ್ಲ. ಅವನಿಗೆ ತುಂಬೇಹುವ್ವೇ ಇಷ್ಟವಂತೆ. ಮುಂಡುಗನಸರದ ಪ್ರೈಮರೀ ಸ್ಕೂಲು ಮೇಶ್ಟ್ರು ಶಂಕ್ರಯ್ಯನೇ ಶೃಂಗೇಶ್ವರನಿಗೆ ಅರ್ಚಕನಂತೆ.

ರಾಜ ಚಂದಿ ನಾನು ಬೆಳೆಸಿಕೊಂಡಿದ್ದ ಕೆನ್ಯೆನ್‌ಸೆನ್ಸ್ ನಮ್ಮನ್ನ ಶಂಕ್ರಯ್ಯನ ಮನೆಗೆ ಒಯ್ತು.

ಶಂಕ್ರಯ್ಯ–ಮುಂಡುಗನಸರದ ಪ್ರೈಮರಿ ಸ್ಕೂಲು ಓಲ್ಡ್ ಸ್ಟೂಡೆಂಟ್. ಅವನ ತಂದೆ ಈ ಊರಿನ ಶ್ಯಾನಭೋಗರಾಗಿದ್ದರಂತೆ. ಆಗ ಈ ಸ್ಕೂಲು ಶುರು

ಆಯ್ತಂತೆ. ಅವರೇ ಮೊದಲ ಮಾಸ್ಟರು. ಈಗ ಶ್ಯಾನುಭೋಗರಿಲ್ಲ. ಶಾನೇರು ಮಾರಿ ಅಂದ್ರೆ ಏನೂಂತ ಕೇಳಿದ್ರೆ ಕಣ್‌ಕಣ್ ಬಿಡೋ ವಿಲೇಜ್ ಅಸಿಸ್ಟೆಂಟುಗಳು ಆ ಕೆಲ್ಸ ನೋಡ್ಕೊತಾರಂತೆ. ಶಂಕ್ರಯ್ಯ–ಆನೇಕಲ್‌ನಲ್ಲಿ ಲೋಯರ್ ಸೆಕೆಂಡ್ರಿ ಪಾಸ್ ಮಾಡಿದನಂತೆ.

ನಾವು ಶಂಕ್ರಯ್ಯನ ಮನೆಗೆ ಹೋದಾಗ ಸ್ಕೂಲು ಅಸಿಸ್ಟೆಂಟ್ ಇನ್‌ಸ್ಪೆಕ್ಟರೂ ಇದ್ರು. ಅವರು ಬೆಳಿಗ್ಯೆ ಮುಂಡುಗನಸರಕ್ಕೆ ಬಂದಿದ್ದರಂತೆ. ರಾತ್ರಿ ಅವರು ಅಲ್ಲೇ ರಾಣಿ. ಶಂಕ್ರಯ್ಯ ನಮ್ಮನ್ನೂ ಊಟಕ್ಕೆ ಆಹ್ವಾನಿಸಿದರು. ಊಟವಾದ ಮೇಲೆ ಸ್ಕೂಲಿನಲ್ಲೇ ನಮಗೆ ಲಾಡ್ಜಿಂಗ್.

ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ ಸುಬ್ಬಯ–ಬೆಳಿಗ್ಗೆ ಬಸ್ಸಿನಿಂದ ಇಳಿದು ಎರಡು ಮೈಲಿ ನಡೆದು ಊರು ಸೇರಿದ್ದರು. ಬಸ್ಸಿನಿಂದ ಇಳಿದ ತಕ್ಷಣ ರಸ್ತೆ ಬದಿಯಲ್ಲಿದ್ದ ಅಂಗಡೀಲಿ, ಮುಂಡುಗನಸರಕ್ಕೆ ದಾರಿ ಕೇಳಿದರಂತೆ. ತಾವು ಯಾರೂಂತ ಅಂಗಡಿಯವ ಕೇಳಿದ್ದಕ್ಕೆ ಅಸಿಸ್ಟೆಂಟ್ ಇನ್‌ಸ್ಪೆಕ್ಟರ್–ಅಂದಂತೆ. ತಕ್ಷಣ ಅಂಗಡಿಯವ ಎದ್ದು–ಅವರಿಗೆ ಒಂದು ಎಳ್ನೀರು ಹೊಚ್ಚಿ ಕೊಟ್ಟು–ಮುಂಡಗನಸರಕ್ಕೆ ಹೋಗೋಕೆ ಒಬ್ಬ ಆಳನ್ನ ಕಳಿಸ್ತೀನಿ ಅಂತ ಹೇಳಿದನಂತೆ. ಸುಬ್ಬಯ್ಯನೋರಿಗೆ ತುಂಬಾ ಖುಷಿ ಯಾಯ್ತು. ಎಳ್ನೀರ್ ಕುಡೀತಾ ಕೇಳಿದರಂತೆ–ಸುತ್ತ ಮುತ್ತ ಎಷ್ಟು ಹಳ್ಳಿ ಇವೆ. ಮಕ್ಕಳ್ನೆಲ್ಲಾ ಶಾಲೆಗೆ ಕಳಿಸ್ತಾರಾ ?–ಅಂತ. ಆಗ ಅಂಗಡಿಯವ ಕೇಳಿದನಂತೆ ನೀವು ಯಾವ ಇನ್‌ಸ್ಪೇಟ್ರು ?—ಅಂತ. ತಾವು ಸ್ಕೂಲ್ ಇನ್‌ಸ್ಪೆಕ್ಟರೂ ಅಂದ್ರಂತೆ. ಓ–ಅಂಗಾ ? ಅಂಗಾರೆ ಅಂಗೇ ನಡೀತಾವೋಗಿ–ಅಲ್ಲಿ ಮಾವಿನ ತೋಪೈತೆ-ಅದ್ರ ಪಕ್ಕಾಗೇ ಮುಂಡ್ಗನಸರ ಸಿಕ್ತೈತೆ–ಎಳ್ನೀರ್ ಒಂದ್ರೂಪಾಯಿ ಅಂದ್ನಂತೆ.

ಸುಬ್ಬಯ್ಯ–ಒಂದ್ರೂಪಾಯಿತೆತ್ತು ನಡೆದು ಊರು ಸೇರಿದ್ರಂತೆ. "ನೋಡಿ ಸ್ವಾಮಿ–ನಾನೇನಾದ್ರೂ ಪೋಲೀಸ್ ಇನ್‌ಸ್ಪೆಕ್ಟರಾಗಿದ್ರೆ ಆ ಮರ್ಯಾದೇ ಬೇರೆ ಇರ್ತಿತ್ತು !" ಅಂದ್ರು.

ಮರುದಿನ ಬೆಳಿಗ್ಯೆ ಸ್ನಾನ ಫಲಹಾರಾದಿಗಳನ್ನು ಮುಗಿಸಿಕೊಂಡು ಹೊರಡಲು ರೆಡಿಯಾದೆವು. ಸುಬ್ಬಯ್ಯ ರಸ್ತೆವರಿಗೂ ನಮ್ಮ ಜೊತೆ ಬರುವವರಿದ್ದರು. ಹೊರಡ್ತುಕ್ಕೆ ಮುಂಚೆ ಸುಬ್ಬಯ್ಯ–ಶಂಕ್ರಯ್ಯನ್ನ ಕರೆದು ಅವರ ಕೈಗೆ ಐದು ರೂಪಾಯಿ ಕೊಡ್ತಾ ಹೇಳಿದರು–"ಶಂಕ್ರಯ್ಯ–ಈ ಐದು ರೂಪಾಯಿಟ್ಕೊಳಿ. ಅದರಲ್ಲಿ ಒಂದೆರಡು ಸ್ಲೇಟುಗಳನ್ನ ಕೊಂಡುತಂದು ಬಡ ಹುಡುಗರಿಗೆ ಕೊಡಿ– ಅಂತ.

ರಾಜ ಚಂದಿ ನನ್ನನ್ನ ತಿವಿದರು ನಾನೂ ಐದು ರೂಪಾಯಿ ಶಂಕ್ರಯ್ಯನ ಕೈಗೆ ಬಡ ಹುಡುಗರಿಗಾಗಿ ಕೊಟ್ಟೆ.

ಹಾದಿಯಲ್ಲಿ ಸುಬ್ಬಯ್ಯ ಹೇಳಿದರು–"ನೋಡಿ ಸರ್ ಈ ಹಳ್ಳಿ ಮಾಸ್ತರುಗಳು ನಾವು ಬಂದಾಗಲೆಲ್ಲಾ ಉಪಚಾರ ಮಾಡ್ತಾರೆ. ಅವರ ಕಷ್ಟಗಳೇನಿದೆಯೋ ನಮಗೆ ಗೊತ್ತಾಗೊಲ್ಲ. ಅವರು ಮಾಡಿದ್ದಕ್ಕೆ ನಾವು ಬಿಲ್ ಕೇಳೋಹಾಗಿಲ್ಲ. ಮರ್ಯಾದೆ ಪ್ರಶ್ನೆ. ಅದಕ್ಕೋಸರ ಈ ರೀತಿ ದುಡ್ಡು ಕೊಡ್ತೇನೆ. ಮಾಸ್ತರು ಅದನ್ನ ತಾವೇ ಇಟ್ಕೊಂಡ್ರೂ ತಪ್ಪಲ್ಲ. ನನ್ನ ಮನಸ್ಸಿಗೂ ನೆಮ್ಮದಿ" ಅಂದ್ರು.

"ಹೌದು ಸರ್. ನಂಗೂ ಹಾಗೇ ಅನ್ಸುತ್ತೆ ಅಂದ ಚಂದಿ–ಕ್ರೂಕು.

ಪರೀಕ್ಷೆ ಬಂತು......



"ಹೆರಾಲ್ಡ್ ಇಲ್ಲಾರೀ, ನಾಳೇ ಫಿಸಿಕ್ಸ್ ಪೇಪರ್ ಕೊಡಲೇ ?"

8

ಋಷಿಗಳ ತಪೋಭಂಗ

—ಡಾ. ಪರಡ್ಡಿ. ಮಲ್ಲಿಕಾರ್ಜುನ

ನಮ್ಮ ಪುರಾಣಗಳಲ್ಲಿ ಮಹಾಮಹಿಮರೆಂದು ಖ್ಯಾತ್ಯಾರಾದ ಋಷಿಮುನಿಗಳ ತಪೋಭಂಗ ಪ್ರಸಂಗಗಳ ಉಲ್ಲೇಖವನ್ನು (ಪಬ್ಲಿಕ್ ಡಿಮ್ಯಾಂಡಿನಿಂದಾಗಿ) ಮಾಡುವ ಪೂರ್ವದಲ್ಲಿ (ಕೆಲವರಾದರೂ) ಋಷಿಗಳು ತಪಸ್ಸನ್ನು ಆಚರಿಸುವಲ್ಲಿ ಯಾವ ಉದ್ದೇಶವನ್ನು ಇಟ್ಟುಕೊಂಡಿದ್ದವೆಂಬುದನ್ನು ಅರಿತು ಕೊಳ್ಳುವದು ಒಳಿತಲ್ಲವೇ? ಏಕೆಂದರೆ ಪ್ರಯೋಜನವಿಲ್ಲದೇ ಮೂಢನೂ ಕಾರ್ಯಪ್ರವೃತ್ತನಾಗಲಾರ. (ಪಯೋಜನಮಸುದ್ದಿಶ್ಯ ನಮಭೋರ್ಽಪಿ ಪ್ರವರ್ತತೇ) ಎಂದು ಒಂದು ಸುಭಾಷಿತ ಸಾರಿ ಹೇಳುತ್ತದೆ. ಅಂದರೆ ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ಎಂಬ ಗೀತೆಯ ಮಾತನ್ನು, ಉಪದೇಶವನ್ನು ಪಾಲಿಸಿದವನು ಮೂಢನೆಂಬುದು ಸ್ವಯಂಸಿದ್ಧವಲ್ಲವೇ? ನಮ್ಮ ಲೋಕಸಭಾ ಚುನಾವಣೆಗಳಲ್ಲಿ, ಅಥವಾ ವಿಧಾನಸಭಾ ಚುನಾವಣೆಗಳಲ್ಲಿ ರಾಷ್ಟ್ರೀಯ ಅಥವಾ ಪ್ರಾಂತೀಯ ಪಕ್ಷಗಳ (ಅವುಕೂಡಾ ಈಗ ನಾಯಿಕೊಡಗಳಂತೆ ಬೆಳೆಯುಂತ್ತಿವೆ) ಅಧಿಕೃತ ಹುರಿಯಾಳುಗಳಿಗಿಂತಲೂ ಪಕ್ಷೇತರರು (ಅಥವಾ ತಾತ್ಕಾಲಿಕವಾಗಿ ಹುಟ್ಟಿಕೊಂಡು ಚುನಾವಣೆಯ ಜೊತೆ ಮೃತಿ ಹೊಂದುವ ಪಕ್ಷಗಳ ಅಭ್ಯರ್ಥಿಗಳು) ಅಧಿಕ ಸಂಖ್ಯೆಯಲ್ಲಿ ಸ್ಪರ್ಧಿಸುವದು ಸರ್ವೇ ಸಾಮಾನ್ಯವಾಗಿದೆ. ಅವರ ಉಮೇದುವಾರಿಕೆಯ ಉದ್ದೇಶ ಓಪನ್ ಸಿಕ್ರೆಟ್ ಎಂದು ಯಾರಿಗೆ ಗೊತ್ತಿಲ್ಲ? ದುರ್ದೈವದಿಂದ ಅವರಲ್ಲಿ ಯಾರಾದರೂ ಪ್ರಭಾವಶಾಲಿ ಯಾಗಿದ್ದಾರೆ ಎನ್ನೋಣ. ಮತಗಳು ಹಂಚಿಹೋಗಿ ತಮ್ಮ ಪಕ್ಷದ ಹುರಿಯಾಳುಗಳು ಸೋಲಬಹುದೆಂಬ ಭೀತಿಯಿಂದ (ಅದು ಬಹುತೇಕ ಅಸಂಭವ) ಆ ರಾಷ್ಟ್ರೀಯ ಪಕ್ಷಗಳ ಉಮೇದುವಾರರಾಗಲೀ (ಆ ಪಕ್ಷಗಳೇ ಎಂದರೆ ಹೆಚ್ಚು ಸಮಂಜಸ) ಹಣ ಕೊಟ್ಟು ಅವರ ಉಮೇದುವಾರಿಕೆಯನ್ನು ತಮ್ಮ ಪಕ್ಷದ ಅಭ್ಯರ್ಥಿಯ ಪರವಾಗಿ ಹಿಂತೆಗೆದುಕೊಳ್ಳುವಂತೆ ಮಾಡುತ್ತಾರೆ. ಇದೇ ಉದ್ದೇಶಕ್ಕಾಗಿ ನನ್ನ ಕೆಲ ಮಿತ್ರರು ಚುನಾವಣೆಯ ಕಣದಲ್ಲಿ ಇಳಿದು (ಇಡಿಗಂಟು ಹೋಗುವದೆಂದು ಗೊತ್ತಿದ್ದೂ) ಯಾವ ಪಕ್ಷದವರೂ ಅವರನ್ನು ಮಾತಾಡಿಸದಿದ್ದಾಗ ಆ ಪಕ್ಷಗಳ ವರಿಷ್ಠರ ಸಹಸ್ರನಾಮಾವಳಿ ಮಾಡಿದ್ದನ್ನು ಈ ಪಾಪಿ ಕಿವಿಗಳಿಂದಲೇ ಕೇಳಿದ್ದೇನೆ. ಎದುರು ಪಕ್ಷದ ಅಭ್ಯರ್ಥಿಯ ಜಾತಿಯವನನ್ನು ಪಕ್ಷದವರೇ ನಿಲ್ಲಿಸಿ, ಎದುರಾಳಿಯ ಮತಗಳನ್ನು ಒಡೆಯುವುದು ಈಚಿನ Practice ಎಂದು ಕೆಲವರೆನ್ನುತ್ತಾರೆ.

ಇದೇ ತರ್ಕವನ್ನು ನಮ್ಮ ಪುರಾಣ ಪ್ರಸಿದ್ಧರಾದ ಋಷಿಗಳ ತಪಃಸಾಧನೆಯ ಉದ್ದೇಶಕ್ಕೆ ಅನ್ವಯಿಸಬಹುದಲ್ಲವೇ? ತಾವೇನಾದರೂ ಘನಘೋರ (ಇಂಥ ವಿಶೇಷಣಗಳ ಸರಮಾಲೆಗೆ ಕೊರತೆಯಿಲ್ಲ. ಮಹಾಸ್ವಾಮಿಗಳು ಶ್ರೀ ಶ್ರೀ 108 ಹಚ್ಚಿಕೊಳ್ಳುವಂತೆ) ತಪಸ್ಸು ಮಾಡಲು ಪ್ರಾರಂಭಿಸಿದರೆ ಇಂದ್ರ ಪದವಿಗಾಗಿಯೇ ಅವರು ತಪಸ್ಸು ಮಾಡುತ್ತಾರೆ ಎಂದು ತಪ್ಪಾಗಿ ಭಾವಿಸಿ, (ಏಕೆಂದರೆ ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವ ಇಂದ್ರ ತನ್ನ ಸ್ವರ್ಗವನ್ನೇ ಕೂಪಮಂಡೂಕನಂತೆ ಸರ್ವಶ್ರೇಷ್ಠವೆಂದು ಭಾವಿಸುತ್ತಾನೆ) ಅವರನ್ನು ತಪಸ್ಸಿನಿಂದ ವಿಮುಖರನ್ನಾಗಿ ಮಾಡಲು ಸುಕುಮಾರ ಆಯುಧಗಳಾದ ಅಪ್ಸರೆಯರಲ್ಲಿ ಕೆಲವರನ್ನು ಕಳಿಸುವ ಕುಶಲತೆ, ರಾಜನೀತಿ ಚಾತುರ್ಯ (ಇಲ್ಲದಿದ್ದರೆ ಆಗಾಗ ಸ್ಥಾನ ಭ್ರಷ್ಟನಾದರೂ ತನ್ನ ಪದವಿಯನ್ನು ಖಾಯಂಗೊಳಿಸುವದು ಅವನಿಗೆ ಸಾಧ್ಯವಿತ್ತೆ?) ದೇವೇಂದ್ರನಲ್ಲಿಗೆ ಎಂಬುದನ್ನು ಮರೆಯಲಾಗದು, 100 ಯಾಗಗಳನ್ನು ಸಫಲವಾಗಿ ಪೂರೈಸಿದರೆ ಆ ವ್ಯಕ್ತಿ ಇಂದ್ರಪದವಿಗೆ ಅರ್ಹನಾಗುತ್ತಾನೆಂಬ ನಂಬುಗೆಯೇ' ಇದಕ್ಕೆ ಕಾರಣ. ಆದರೆ ಆ ಪ್ರಸಂಗ ಬರದಂತೆ ನೋಡಿಕೊಳ್ಳದಷ್ಟು ಇಂದ್ರ ದಡ್ಡನಲ್ಲ. (ಇಂದ್ರನಿಂದ ಸ್ಫೂರ್ತಿಪಡೆದ ನಮ್ಮ ಆಳುವ ಪಕ್ಷದವರು ವಿರೋಧಿಗಳು ಒಗ್ಗಟ್ಟಾಗಿ ತಮ್ಮ ಅಧಿಕಾರವನ್ನು ಅಲ್ಲಾಡಿಸುವ ಮುನ್ನವೇ ಅವರಲ್ಲಿ ಆ ಒಗ್ಗಟ್ಟು ಉಂಟಾಗದಂತೆ ನೋಡಿಕೊಳ್ಳುತ್ತಿರಬಹುದು.) ಯಜ್ಞದ ಕುದುರೆಯನ್ನು ಅಪಹರಿಸಿಯೋ ಅಥವಾ ಇನ್ನಾವುದೇ ಮಾಯೆಯಿಂದಲೋ ನೂರನೆಯ ಯಜ್ಞ ಪೂರೈಸಿದಂತೆ ಮಾಡುತ್ತಿದ್ದನು. ಇದನ್ನರಿತೇ ದಿಲೀಪ ಮಹಾರಾಜನು ಇಂದ್ರ ಪದವಿಗಿಂತ ಹಿರಿದಾದ ಮೋಕ್ಷವನ್ನು ಬಯಸಿ (ಇಂದ್ರಪದವಿ ಕಳೆದರ್ಜೆಯದೆಂದು ದಿಲೀಪ ತಿಳಿದಿದ್ದರಿಂದಾಗಿಯೇ ಇದ್ರ ತನ್ನ ಪದವಿಯಲ್ಲಿ ಸುಖವಾಗಿರುವಂತೆ, ಪ್ರಾಜ್ಞನಾಗರಿಕರು ರಾಜಕಾರಣದ ಹೊಲಸಿಗೆ ಹೇಸಿ ದೂರ ಉಳಿದ್ದರಿಂದಲೇ ನಮ್ಮ ರಾಜಕಾರಣಿಗಳೂ ತಮ್ಮ ಅಧಿಕಾರದಲ್ಲಿ ಸುಖವಾಗಿದ್ದಾರೆ) ಇಂದ್ರನಿಗೆ ಮತ್ಸರವುಂಟಾಗದಿರಲೆಂಬ ಸದುದ್ದೇಶದಿಂದ 99ನೆಯ ಯಜ್ಞಕ್ಕೆ ನಿಲ್ಲಿಸಿದನೆಂದು ಓದುತ್ತೇವೆ.

ಅತಿಕ್ಷ್ಮದೇಕೋನ ಶತಕ್ರತುತ್ವೇ
ಶಕ್ರಾಭ್ಯುಸೂಯಾವಿನಿವೃತ್ತಯೇ ಯಃ ।...

ಈಗಲಾದರೂ ಅರ್ಥವಾಯ್ತೊ, ಋಷಿಗಳು ಅಪ್ಸರೆಯರ ಸಂಗಕ್ಕಾಗಿ ತಪಸ್ಸು ಮಾಡುತ್ತಿದ್ದರೆಂಬುದು? ಇಲ್ಲದಿದ್ದರೆ ಹಿಂದಿನವರು ಮಾಡಿದ ತಪ್ಪನ್ನೇ (ಅದು ನಿಜಕ್ಕೂ ತಪ್ಪಲ್ಲ) ಮುಂದಿನ ಋಷಿಗಳೂ ಏಕೆ ಮಾಡುತ್ತಿರುವರು? ಅಪ್ಸರೆಯ ಸಹವಾಸಕ್ಕಾಗಿಯೇ ಅವರು ತಪಸ್ಸು ಮಾಡುತ್ತಿದ್ದರೂ ಆ ರೀತಿಯ ಭಾವನೆ

ಇಂದ್ರನ ಮನದಲ್ಲಿ ಉಂಟಾಗದಂತೆ ನೋಡಿಕೊಳ್ಳಬೇಕಾದುದು ಅನಿವಾರ್ಯ. ಹೀಗೆ ಘನಘೋರ (ತಪಸ್ವಿಗಳ ದೃಷ್ಟಿ ತಾವು ಆಚರಿಸಿದ್ದೇ ಘನಘೋರಕ್ಕಿಂತಲೂ ಘೋರವಾದ ತಪಸ್ಸು) ತಪಸ್ಸು ಆಚರಿಸಿದರೂ ಅಪ್ಸರೆಯರು ಅವರತ ತಪೋಭಂಗಕ್ಕೆ ಬರದಿದ್ದರೆ ಇಂದ್ರನ ವಂಶವನ್ನುದ್ಧರಿಸುತ್ತ, ಅಂದರೆ ಅವನ ಸಹಸ್ರ ನಾಮಾವಳಿಯನ್ನು ಪಠಿಸುತ್ತ ಹೇಳಹೆಸರಿಲ್ಲವೆ ದಿಕ್ಕೆಟ್ಟು ಹೋದ ಋಷಿಗಳಿಗೆ ಲೆಕ್ಕವಿಲ್ಲ.

ಅಸ್ತು. ಪ್ರಕೃತ. ವಿಷಯಕ್ಕೆ ಬರೋಣ (ತಲೆ ನೂರೆಂಟು ವಿಷಯಗಳ ಕಸದಬುಟ್ಟಿಯಾದಾಗ ಈ ರೀತಿ ಕೊಂಕಣ ಸುತ್ತಿ ಮೈಲಾರಕ್ಕೆ ಹೊಗುವ ಪರಿಸ್ಥಿತಿ ಉಂಟಾಗುತ್ತದೆ) ನಿಯಮಕ್ಕೆ ಅನುಸಾರವಾಗಿ ಅಪ್ಸರೆಯರ (ತಾವು ತಮ್ಮ ಮನದಲ್ಲಿ ಕಲ್ಪಿಸಿ ಸುಖಿಸುತ್ತಿರುವ ರೂಪಕ್ಕಿಂತಲೂ ಹೆಚ್ಚು ಆಕರ್ಷಕವಾದ) ರೂಪಲಾವಣ್ಯಕ್ಕೆ ಬೆರಗಾಗಿ ತೆರೆದ ಬಾಯಿ ಮುಚ್ಚದೇ ಅವರ ದಾಸಾನುದಾಸರಾಗುವುದನ್ನು ಕಾಣುತ್ತೇವೆ. ಆದರೆ ಈ ನಿಯಮಕ್ಕೆ ಅಪವಾದವಿಲ್ಲವೆಂದಲ್ಲ (ಆದರೂ ಅಪವಾದ ನಿಯಮವಾಗಲಾರದು) ಅಪ್ಸರೆಯರ ಬೆಡಗು ಬಿನ್ನಾಣಕೆ ಹಲ್ಲುಗಿಂಜದೇ ಜೊಲ್ಲುಸುರಿಸದೇ ಬಂದದಾರಿಗೆ ಸುಂಕವಿಲ್ಲವೆಂದು ಹೇಳಿದರೂ ಕೇಳದೇ ತಮ್ಮ ಕಪಿಚೇಷ್ಟೆಗಳನ್ನು (ಅಪ್ಸರೆಯರ ಹಾಗೂ ಈಗಿನ ಕ್ಯಾಬರೆ ನರ್ತಕಿಯರ ಚೇಷ್ಟೆಗಳು ಕಪಿಚೇಷ್ಟೆಯೆಂದರೆ ಕಪಿಗಳಿಗೆ ಅಪಮಾನ) ಮುಂದುವರಿಸಿದಾಗ ಅವರಿಗೆ ಶಾಪಕೊಟ್ಟಂಥ ಘನಮಹಿಮ ಮಹಾತಪಸ್ವಿಗಳುಂಟು. ಹಾಗೆ ಅವಮಾನಿತರಾದ ಅಪ್ಸರೆಯರೇ ತಪಸ್ವಿಗಳಿಗೆ ಶಾಪಕೊಟ್ಟ ರೋಚಕ ಪ್ರಸಂಗಗಳಿಗೂ ಕೊರತೆಯಿಲ್ಲ. ಇದೂ ಅಲ್ಲದೇ, ತಮ್ಮ ತಪೋಭಂಗಕ್ಕಾಗಿ ಬಂದ ಅಪ್ಸರೆಯರ ಗರ್ವಭಂಗಕ್ಕಾಗಿ (ಮಾನಭಂಗವೆಂದರೆ ಅವರಿಗೆ ಮಾನವಿತ್ತೆಂದು ಕಮಿಟ್ ಮಾಡಿದಂತಾಗುವದಿಲ್ಲವೇ?) ಸೌಂದರ್ಯದಲ್ಲಿ ಅವರನ್ನು ಮೀರುವ ಪ್ರತಿ ಅಪ್ಸರೆಯರನ್ನು ಸೃಷ್ಟಿಸಿದ ಭೂಪರು ಇಲ್ಲದಿಲ್ಲ. ಅಪ್ಸರೆಯ ದರ್ಶನದಿಂದಲೇ ವೀರ್ಯಸ್ಖಲನವಾಗುವ ದುರ್ಬಲ ಋಷಿಗಳಿಗಿಂತಲೂ ಅಪ್ಸರೆಗಾಗಿ ಹೋರಾಡಿ ಪ್ರಾಣ ನೀಗಿದ (ಸುಂದೋಪಸುಂದರೆಂಬ) ರಾಕ್ಷಸರೇ ಉತ್ತಮರಲ್ಲವೇ?

ಈ ಎಲ್ಲ ಕಾರುಭಾರಕ್ಕೆ ಕೇಂದ್ರ ಬಿಂದುವಾದ ಅಮರಾವತಿಯಲ್ಲಿ ದರಬಾರು ಮಾಡುವ ಇಂದ್ರನೇ ಅಹಲ್ಯೆಯನ್ನು ಕಾಮಿಸಿ ಗೌತಮ ವೇಷದಲ್ಲಿ ಅವಳನ್ನು ರಮಿಸಿ (ಅಂದರೆ ಅವಳ ಮಾನಭಂಗ ಮಾಡಿ) ಅವಳ ಪತಿ ಗೌತಮನ ಶಾಪದಿಂದ ಸಹಸ್ರಯೋನಿಯಾಗಿ ಪರಿಣಮಿಸಿ ಪಡಬಾರದ ಪಾಡು ಪಟ್ಟು ಹೇಗೋ ಸಹಸ್ರಾಕ್ಷನಾದ ಘಟನೆ ಅತಿರಂಜಕ, ಅದೇ ಒಂದು ಮಹಾಪುರಣವಾಗುವಷ್ಟು ಹಿರಿದು. ಆದರೂ ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖವನ್ನು ಸಹಿಸುವ ಶಕ್ತಿ (ಬಂಡತನ)ಯುಳ್ಳ ಇಂದ್ರ ಒಡೆಯನ ಹೆದರಿಕೆ ಇದ್ದರೂ ಹಳಸಿದನ್ನಕ್ಕಾಗಿ ಸುಳಿ

ಯುವ ನಾಯಿ ಮತ್ತು ಅದೇ ಸ್ವಭಾವದ ಯುವಕ ಇವರಲ್ಲಿ ಸಾಮ್ಯ ಕಂಡೇ ಪಾಣಿನಿಯು ಒಂದೇ ಸೂತ್ರದಲ್ಲಿ ಮೂವರನ್ನು ಸೇರಿಸಿದ್ದಾನೆ. ಪಾಣಿನಿಯ ಮನೋವಿಜ್ಞಾನ ಅಮೋಘ)

ಮೊದಲಿಗೆ ದುರ್ವಾಸನನ್ನೇ ತೆಗೆದುಕೊಳ್ಳೋಣ. ಶಾಪಕೊಡುವದನ್ನೇ ಪ್ರೊಫೆಶನ್ ಮಾಡಿಕೊಂಡು ಪುರಾಣ ಪ್ರಸಿದ್ಧನಾಗಿರುವಂತೆ ಶ್ರೀಘ್ರಕೋಪಕ್ಕೆ ಇನ್ನೊಂದು ಹೆಸರಾಗಿ ಲೋಕಪ್ರಸಿದ್ಧನೂ ಆಗಿದ್ದಾನೆ. ಅವನ ಈ ರೀತಿಯ ವಿಕ್ಷಿಪ್ತ ವರ್ತನೆಗೆ ಅನೇಕರು ಅನೇಕ ಕಾರಣಗಳನ್ನು ಕೊಟ್ಟರೂ (ಇದೇ ಪತ್ರಿಕೆಯ ಏಪ್ರಿಲ್ 1984 ಸಂಚಿಕೆಯಲ್ಲಿ ಶ್ರೀ ಲಾಂಗೂಲಾಚಾರ್ಯರ ದುರ್ವಾಸ ಚರಿತ್ರೆಯನ್ನು ಅವಲೋಕಿಸಬಹುದು) ನಿಜವಾದ ಕಾರಣ ಯಾರಿಗೂ ಗೊತ್ತಿರುವಂತೆ ಕಾಣುವುದಿಲ್ಲ. ಔರ್ವನೆಂಬ ಮುನಿಯ ಮಗಳಾದ ಕಂದಳಿ ಇವನ ಹೆಂಡತಿಯಾಗಿದ್ದು, ಕೋಪದಲ್ಲಿ ದುರ್ವಾಸನನ್ನು ಮೀರುವದಷ್ಟೇ ಅಲ್ಲ, ಅವಳನ್ನು ಕೋಪದಲ್ಲಿ ಮೀರುವವರು ಯಾರೂ ಇರಲಿಲ್ಲ. ಅವಳ ಕೋಪಕ್ಕೆ ಗಡಗಡ ನಡುಗುವ (ನಡುಗಿದೆ ಗಡಗಡ ಗಂಗಮ್ಮ ಎಂಬ ಸಿನೇಮಾ ಪದ್ಯ ಸ್ಮರಣೆಗೆ ಬಾರದಿದ್ದರೆ ಅವನೆಂಥ ಆಧುನಿಕ ನಾಗರಿಕ ?) ವೀರಾಧಿವೀರ ದುರ್ವಾಸನು ಕಂಡವರನ್ನು ಅದರಲ್ಲಿಯೂ ಸುಖವಾಗಿರುವ ಇಲ್ಲವೆ ಸುಖದ ಕನಸು ಕಾಣುವ ಹೆಂಗಳೆಯರನ್ನು ಕಂಡಹಾಗೆ ಶಪಿಸುತ್ತ ಹವ್ಯಾಸ ಬೆಳೆಸಿಕೊಂಡಿರಬೇಕೆಂಬುದು ಯುಕ್ತಿ ಸಂಗತ. ಶ್ರೀಘ್ರಕೋಪಿಯಾದ ಜಗಳಗಂಟಿಯಾದ ಹೆಂಡತಿಗೆ ಗಂಡನಾದ ಬಡಪಾಯಿ ಸಾಕ್ರೆಟಿಸ್‌ನಂತೆ ದಾರ್ಶನಿಕನಾಗಿ ಪಲಾಯನವಾದಿಯಾಗಬೇಕು, ಅಥವಾ ದುರ್ವಾಸನಂತೆ ಸುಖಿಗಳನ್ನು ಕಂಡು ಹೊಟ್ಟೆಯುರಿಸಿಕೊಳ್ಳುತ್ತ ಸಮಾಜವನ್ನೇ ನಡುಗಿಸುವ ಧೀರನಾಗಬೇಕು. ಮೂರನೇ ಹಾದಿಯಿಲ್ಲವೇನೋ; ತನಗಿರದಭಾಗ್ಯ ಇತರರಿಗೇಕೆಂಬ ಸಮಾಜವಾದ, ಸಾಮ್ಯವಾದ ದುರ್ವಾಸನದೆಂದು ಒಪ್ಪಲೇಬೇಕು. (ಈ ವಿಷಯವಾಗಿ ಮಹಾಭಾರತದ ಆದಿಪರ್ವದ, 67, 194, 196 ಅಧ್ಯಾಯಗಳನ್ನು ಅವಲೋಕಿಸಬಹುದು, ನನ್ನಲ್ಲಿ ನಂಬುಗೆಯಿಲ್ಲದಿದ್ದರೆ)

ತಾರ್ಕ್ಷಿ ಎಂಬ ಅಪ್ಸರೆ ಈ ಮುನಿಯ (ಮುನಿ—ಮುನಿಯುವವನು ಎನ್ನುವದಕ್ಕೆ ಶ್ರೇಷ್ಠ ನಿದರ್ಶನ) ತಪೋಭಂಗಕ್ಕೆ ಪ್ರಯತ್ನಿಸಿ (ಅವನ ಕೊಳಕು ಬಟ್ಟೆಯನ್ನು ಕಂಡು ಕಡುನೊಂದು ಬೆದರಿಬೆಂಡಾಗಿ ಸರಿಯಾಗಿ ಪ್ರಯತ್ನಿಸಲಿಲ್ಲವೇನೋ ?) ಅವನ ಶಾಪಕ್ಕೆ ಗುರಿಯಾಗುತ್ತಾಳೆ. ಬಹುಶಃ ಪ್ರಣಯಭಂಗದಿಂದಾದ (ತಪೋಭಂಗ ಶುದ್ಧ ಕುಹಕ) ಕೋಪದಿಂದ ಶಾಪಕೊಟ್ಟು ಅವಳನ್ನು ಪಕ್ಷಿಯನ್ನಾಗಿ ಮಾಡಿದ್ದರೂ ಸಹ, ಕಶ್ಯಪಮುನಿಯಿಂದ ಸುರಸೆಯಲ್ಲಿ ಜನಿಸಿದ ಅಜಾಮುಖಿಯೆಂಬ

ನಾಗಕನ್ಯೆ (ತಪೋಭಂಗ ಮಾಡಿದ ಉಲ್ಲೇಖವಿರದಿದ್ದರೂ) ದುರ್ವಾಸನನ್ನು ಮೋಹಗೊಳಿಸುವದಷ್ಟೇ ಅಲ್ಲ, ಅವನ ಜೊತೆ ಕೆಲಕಾಲವಾದರೂ ಸಂಸಾರ ಮಾಡಿ ವಾತಾಪಿ, ಮತ್ತು ಇಲ್ವಲ ಎಂಬ ಇಬ್ಬರು ಮಕ್ಕಳನ್ನು ಪಡೆದಳೆಂಬುದಕ್ಕೆ ಪದ್ಮ ಪುರಾಣವೇ ಸಾಕ್ಷಿ. ರುದ್ರನ ಅಂಶದಿಂದ ಜನಿಸಿದ ಈ ಚಂಡಕೋಪಿ ಋಷಿಯ ಮಕ್ಕಳೇ ಅವರೆನ್ನುವದಕ್ಕೆ ಅವರ ರಾಕ್ಷಸ ಸ್ವಭಾವವೇ ಸಾಕ್ಷಿ. ಕೊಳತುನಾರುವ ಕೊಳಕು ಬಟ್ಟೆಯ ಈ ಮುನಿಯ ಜೊತೆ ಸಂಸಾರ ಮಾಡಬೇಕಾದರೆ ಅವಳ ಧೈರ್ಯ ವನ್ನು ನಾವು ಮೆಚ್ಚಲೇಬೇಕು. ಅಥವಾ ಶಾಪ ಕೊಡುತ್ತಿರುವಾಗ ದುರ್ವಾಸನಾದ ಈ ಋಷಿ ಪ್ರಣಯ 'ಪ್ರಸಂಗದಲ್ಲಿ ಸುವಾಸನಾಗಿ ಪರಿಣಮಿಸುತ್ತಿರಬಹುದೇ ? ಶೂರ್ಪಣಖಿಯು ರಾಮನನ್ನು ಮೋಹಿಸಿದಾಗ ಮೋಹಿನಿಯಾಗಿ ಬಂದಿರಲಿಲ್ಲವೆ ? ಈ ಮಾತು ನಿಜವಾದರೆ ತೀರ ಇತ್ತೀಚಿನ ಶೋಧಗಳಿಂದಾಗಿ 'ಜೆಕಿಲ್ ಹೈಡ್ (ಪುರುಷಾ-ಮೃಗ) ಎಂಬ ಹೆಸರಿನಿಂದ ಒಬ್ಬನೇ ದ್ವಿಮುಖ (ಗೋಮುಖ ಇವರೆ ದುರಿಗೆ ಎಷ್ಟೋ ಉತ್ತಮ) ನೀತಿಯಿಂದಾಗಿ ಹೆಮ್ಮೆ ಪಡುವ ಪಾಶ್ಚಾತ್ಯರಿಗಿಂತಲೂ ನಾವೂ ಎಷ್ಟೋ ಮುಂದುವರಿದಿದ್ದೇವೆ. (ಕಾವ್ಯ, ಪುರಾಣಾದಿಗಳಲ್ಲಿ) ಎಂದು ತಲೆ ಎತ್ತಿ ತಿರುಗಬಹುದಲ್ಲವೇ ?

ಈ ಘಟನೆಯನ್ನು ಅವಲೋಕಿಸಿದಾಗ ಆಧುನಿಕ ಪ್ರಸಿದ್ಧ (ಸತ್) ಪುರುಷರ ಪ್ರಣಯ ಪ್ರಸಂಗಗಳು, ಅವರ ರಹಸ್ಯ ರಾತ್ರಿಗಳು, ತೀರಾ ಸಪ್ಪೆಯೆಂದು ತೋರುವದಿಲ್ಲವೇ ? ಒಟ್ಟಿನಲ್ಲಿ ತನ್ನ ಪ್ರಣಯ ಜೀವನ ಯಾರಿಗೂ ಗೊತ್ತಾಗ ದಿರಲಿ ಎಂಬ ಉದ್ದೇಶದಿಂದ ತನ್ನ ಭೀಕರ ರೂಪವನ್ನು, ಕೆಟ್ಟವಾಸನೆಯನ್ನು ವ್ಯಕ್ತ ಗೊಳಿಸುತ್ತ ಓಡಾಡಿಕೊಂಡಿರಬೇಕೆಂದು ತೋರುತ್ತದೆ.

(ಮುಂದಿನ ತಿಂಗಳು ವಿಶ್ವಾಮಿತ್ರ ಮೊದಲಾದವರ ವೈಯಕ್ತಿಕ ಜೀವನಗಳು)

"ಬಿದ್ದೂರಿನ ಬಿಗ್‌ಬೆನ್"

—ಶೀನು

ಸಿಟ್ಟು, ಕೋಪ, ತಾಪ. ಸನ್ನಿ, ಪಿತ್ತಕೆರಳುವಿಕೆ, ತಲೆತಿರುಕತನ ಇತ್ಯಾದಿಗಳಲ್ಲಿ ತರತಮಗಳು ಹೇಗೋ ನನಗೆ ತಿಳಿಯದು. ಆದರೆ ಇವುಗಳನ್ನೆಲ್ಲಾ ಮೀರಿದ ಒಂದು ವ್ಯವಸ್ಥೆ ಇರುವುದೆಂದೂ ಅದಕ್ಕೆ ಇಂಗ್ಲೀಷಿನಲ್ಲಿ "ಶಂಖವಾದ್ಯ"ವೆಂದು ಹೇಳುವರೆಂದೂ ಕೇಳಬಲ್ಲೆ. ಅಲ್ಲದೇ ಸ್ವಾನುಭವದಿಂದ ಕೂಡ ಕಂಡಿದ್ದೇನೆ.

ಆ ಕತೆ ಹೀಗಿದೆ. ನೀವು ಸುಜ್ಞಾನದಿಂದ ಕೇಳಿ.

*   *   *   *   *

ಇತ್ತೀಚೆಗೆ ಚುನಾವಣೆಯ ಕೆಲಸಕ್ಕೊಂದು ಕರ್ನಾಟಕದ ಅತಿ ಕೊನೆಯ ಕೊಂಪೆಯಾದ ಬಿದ್ದೂರಿಗೆ ಹೋಗಿದ್ದೆ. ಬಿದ್ದೂರು ನಾಗರೀಕತೆಯಿಂದ ದೂರವಾಗಿ ತನ್ನ ಪಾಡಿಗೆ ತಾನು ಬಿದ್ದುಕೊಂಡಿದ್ದ ಒಂದು ಕುಗ್ರಾಮ.

ಚುನಾವಣೆಯ ಕೆಲಸವೆಲ್ಲಿ ಮುಗಿದಾಗ ಮುಂಚ್ಚಂಜೆಯಾಗಿ ಬಿದ್ದೂರಿನ ದಾರಿಯಾಗಿ ಹೋಗುವ ಕೊನೆಯ ಬಸ್ಸು ಹೊರಟು ಹೋಗಿತ್ತು. ಮರು ದಿನ ಬೆಳಿಗ್ಗೆ ಏಳರವರೆಗೆ ಬೇರೆ ಬಸ್ಸು ಬಿದ್ದೂರಿನ ಮೇಲೆ ಹಾಯುವದಿಲ್ಲ. ಹೀಗಾಗಿ ಅಂದಿನ ರಾತ್ರಿಯನ್ನು ಬಿದ್ದೂರಿನಲ್ಲಿ ಕಳೆಯುವ ಮಹಾ ಸೌಭಾಗ್ಯ ನನ್ನದಾಗಿತ್ತು. ಮುಂದೇನಪ್ಪಾ? ಎಂದು ಮತಿಭ್ರಾಂತನಾಗಿ ನಿಂತಾಗ ಒಮ್ಮೆಲೆ ನನ್ನ ಚಡ್ಡಿ-ದೋಸ್ತಿ ಪಾಟೀಲ ಪರಮೇಶಿ ಪ್ರತ್ಯಕ್ಷನಾದ. ತಮಿಳು ಪಿಕ್ಚರಿನಲ್ಲಿ ದೇವರು ಪ್ರತ್ಯಕ್ಷನಾದಂತೆ.

"ನೀನ್ಯಾಕೊ, ಇಲ್ಲಿ?

"ನಿನಗೇನು ಬ್ಯಾನಿ ಬಂದಿತ್ತೋ ಬಿದ್ದೂರಿಗೆ ಬರಲಿಕ್ಕೆ?" ಇತ್ಯಾದಿ ಕುಶಲ ಪ್ರಶ್ನೆಗಳಾದ ಮೇಲೆ ತಿಳಿದದ್ದು ಇಷ್ಟು. ದೇಶದ ಕೊಂಪೆ ಕೊಂಪೆಗಳಲ್ಲಿ ಹೇಗೆ ಚುನಾವಣೆ ನಡೆಸುವುದು ಅವಶ್ಯವೋ ಹಾಗೆಯೇ ದೇಶದ ಅತಿ ಕೊಟ್ಟ ಕೊಂಪೆಯಲ್ಲಿ ಕೂಡ ಒಂದು ರಾಷ್ಟ್ರೀಕೃತ ಬ್ಯಾಂಕಿನ ಶಾಖೆ ಇರಲೇ ಬೇಕು.

ಚುನಾವಣೆಯ ಕೆಲಸಕ್ಕೆ ಬಿದ್ದೂರಿಗೆ ಬಂದ ಪಾಪಿ ನಾನಾದರೆ ಅಲ್ಲಿಯ ಬ್ಯಾಂಕ್ ಮ್ಯಾನೇಜರ ಪಾ. ಪ. ಅಂದರೇ ಪಾಟೀಲ ಪರಮೇಶಿ. ಅಂತೂ ರಾತ್ರಿಯ ಚಿಂತೆ ತಪ್ಪಿತ್ತು.

ಊಟ ಮುಗಿಸಿ ಇನ್ನೇನು ಹಾಸಿಗೆಯ ಮೇಲೆ ಉರುಳಬೇಕೆಂದಾಗ ಕೈಗಡಿ ಯಾರ ನೋಡಿಕೊಂಡೆ. ಅದಾವಾಗಲೋ ಬಂದು ಬಿದ್ದಿತ್ತು. ಪರಮೇಶಿಯ ವಾಚು ಕೆಟ್ಟು ಕಳೆದ ನಾಲ್ಕು ತಿಂಗಳಿಂದ ರಿಪೇರಿಗೆ ಬಿದ್ದಿತ್ತಂತೆ ಹುಬ್ಬಳ್ಳಿಯಲ್ಲಿ. ಆದರೂ ಬೆಳಿಗ್ಗೆ ಕರೆಕ್ಟಾಗಿ ಆರು ಗಂಟೆಗೆ ಎಬ್ಬಿಸುವ ಭರವಸೆಯಿತ್ತ ಪರಮೇಶಿ. ನನಗೆ ನಂಬಿಕೆಯಿಲ್ಲ.

"ಈ ಬಿದ್ದೂರಾಗ ಬೇರೆ ಎಲ್ಲೂ ಗಡಿಯಾರ ಇಲ್ಲೇನೊ ಪರಮೇಶಿ ?" ಎಂದೆ.

"ಇಲ್ಲ"

"ಮತ್ತ ನೀ ಹೆಂಗ ನನ್ನ ಕರೆಕ್ಟ ಆರಕ್ಕ ಎಬ್ಬಿಸ್ತೀ ?"

"ಹೆಂಗಂದ್ರ ಕರೆಕ್ಟ ಆರಕ್ಕೇ ಬಾಜೂದ ಮನೀ ಹಾರೂರ ಮುದಿಕಿ ರಿಂದವ್ವ ಎದ್ದು ದೇವರ ನಾಮ ಹಾಡತಿರ್ತಾಳ ಆವಾಗ ನಾ ಅಲ್ಲ ನಮ್ಮಪ್ಪ ಏಳ್ತಾನ.

"ಆಕಿ ಎದ್ದಾಗ ಕರೆಕ್ಟ ಆರು ಹೊಡೆದಿರತದ ಅಂತ ಯಾತರ ಮ್ಯಾಲಿಂದ ಹೇಳ್ತಿ ?"

"ಯಾಕಂದ್ರ ಗೌಡರ ಕೋಣಾ ಒದರಿದ ಮ್ಯಾಲನ ರಿಂದವ್ವ ಏಳ್ತಾಳ"

ನನಗೆ ಒಂದು ಕಡೆ ನಗೆ, ಬೆಳಿಗ್ಗೆ ಬಸ್ಸು ಸಿಕ್ಕೀತೋ ಇಲ್ಲವೋ ಎಂಬ ಹೆದರಿಕೆ. ಲಘು ಹೃದಯದ ಪರಮೇಶಿಯನ್ನು ಕಂಡು ಹತಾಶತನ, ದಿಗ್ಭ್ರಾಂತಿ, ಎಲ್ಲ ಒಟ್ಟುಗೂಡಿಸಿ ಕೇಳಿದೆ.

"ಹಾಂಗಂದರೇನೋ ಪರಮೇಶಿ ?"

"ಅಂದರೆ ದಿನಾಲೂ ಕರೆಕ್ಟಾಗಿ ಬೆಳಿಗ್ಗೆ ಆರಕ್ಕೇ ಗೌಡರ ಕೋಣ ಒದರ್ತದ" ನಾನು ಹಣೆ ಚಚ್ಚಿಕೊಂಡು ಕೇಳಿದೆ.

"ಆಲ್ಲೋ–ಕೋಣ ಒದರಿದಾಗ ಆರು ಹೊಡೆದಿರತದ ಅಂತ ಹೇಂಗ ಹೇಳತಿ ?"

"ಹೇಂಗಂದ್ರ ಕರೆಕ್ಟ ಆರು ಹೊಡೆದಾಗನ ಕೋಣ ಒದರತೈತಿ. ನನಗೆ ಬ್ರಹ್ಮಾಂಡ ಸಿಟ್ಟು ಬಂತು. ನುಂಗಿಕೊಂಡೆ.

* * * * *

"ಪರಮೇಶೀ" ಎಂದೆ ನಿದ್ದೆ ಬಾರದೇ ಹೊರಳಾಡುತ್ತಾ.

"ಏನೋ" ಎಂದನವನು ಅದೇ ಸ್ಥಿತಿಯಲ್ಲಿ.

ಈ ಊರಾಗ ಗಡಿಯಾರನ ಇಲ್ಲಂದ್ರ ಯಾರಿಗೂ ಟೈಮು ಎಷ್ಟು ಎಂದು ತಿಳಿಯುವ ಜರೂರು ಇಲ್ಲೇನು"

"ಇಲ್ಲ"

"ಅಂದರೇ"

"ಅಂದರ ಈ ಊರವರೆಲ್ಲ ಒಕ್ಕಲತನಾ ಮಾಡ್ತಾರ. ಮುಂಜಾನೆದ್ದು ಹೊಲಕ್ಕ ಹೋಗ್ತಾರ ಸಂಜಿಕೆ ಬರ್ತಾರ. ಹೀಂಗಾಗಿ Time ಎಷ್ಟು ಆತು ಎಷ್ಟು ಹೋತು ತಿಳಕೊಂಡು ಯಾರಿಗೇನು ಆಗಬೇಕಾಗೇತಿ"?

ಹೋಗಲಿ ನಿನಗರ ಬ್ಯಾಂಕ್‌ಗೆ ಹೋಗಲಿಕ್ಕೆ, ಬ್ಯಾಂಕ್ ಬಂದು ಮಾಡಲಿಕ್ಕೆ Time ಎಷ್ಟು ಎಂದು ತಿಳಕೊಳ್ಳೋದು ಬ್ಯಾಡೇನು,

"ಬ್ಯಾಡ"

"ಅಂದರೇ"

"ಅಂದರೇ ನಾನೂ ಸೂರ್ಯ ನೆತ್ತಿಮ್ಯಾಗೆ ಬಂದಾಗ ಬ್ಯಾಂಕ ತಗಿತೇನಿ. ಸಂಜೀಮುಂದ ಮುಚ್ಚತೀನಿ. ಈ ಬ್ಯಾಂಕಿನ್ಯಾಗ ನಾನೆ ಮ್ಯಾನೇಜರ ಕಮ್ ಕ್ಲಾರ್ಕ ಕಮ್ ಪ್ಯೂನ್ ಕಮ್ ಗಿರಾಕಿ.

"ಅಂದರ ಬ್ಯಾಂಕಿಗೆ ಯಾರೂ ಬರೂದು ಇಲ್ಲೇನು ?"

"ಇಲ್ಲ"

"ಅಂದರೇ ......

"ಅಂದರ, ಈ ಊರವರು ಮತ್ತು ಅಜೂಬಾಜೂ ಹಳ್ಳೀಯವರು ಎಲ್ಲಾರೂನೂ ಬ್ಯಾಂಕಿನಾಗ ಸಾಲಾ ತೊಗೊಂಡು ಬಿಟ್ಟಾರ. ಇನ್ಯಾರೂ ಬರಾಂಗಿಲ್ಲ"?

"ಅಲ್ಲೋ ಪರಮೇಶಿ ಯಾರಾರ ಸಾಲಾ ಮರು ಪಾವತಿ ಮಾಡಲಿಕ್ಕೆ ಬಂದರೆ ?

"ಎನ್‌ಕ್ವಾಯರಿ ಆಗತ್ತೈತಿ"

"ಅಂದರೆ"

"ಅಂದರೆ. ಹುಚ್ಚಪ್ಪ! ಈಗ ಹಳ್ಳಿ ಊರಾಗ ಬ್ಯಾಂಕಿನ ಸಾಲಾ ಯಾರೂ ಮರಳಿ ಕೊಡುವುದಿಲ್ಲ. ಹಂತದರಾಗ ಯಾರಾರ ತಿರುಗ ಕೊಡಾಕ ಬಂದ್ರ, ಇದರಾಗೇನೋ ಫ್ರಾಡ ಐತಿ ಮ್ಯಾನೇಜರೂ ಮತ್ತು ಸಾಲಾ ತೊಗೊಂಡವ್ರು ಕೂಡಿ ಏನೋ ಮಸಲತ್ತು ಮಾಡ್ಯಾರ ಅಂತ ಮ್ಯಾಗಿನವರಿಗೆ ಸಂಶೆ ಬಂದು ಎನ್‌ಕ್ವಾಯರೀ ಮಾಡ್ತಾರ"

ದೇಶದಲ್ಲಿ ಬ್ಯಾಂಕಿಂಗ್ ಉದ್ದಿಮೆ ಸಾಧಿಸಿದ ಪ್ರಗತಿಯನ್ನು ಕಂಡು ನಿಜವಾಗಿ ಹೆಮ್ಮೆ ತಾಳಿದೆ,

"ಪರಮೇಶಿ" ಎಂದೆ

"ಏ, ನೀನು ಎನ್‌ಕ್ವಾಯರೀಗೆ ಬಂದವರಂಗೆ ಮಾತಾಡಾಕಹತ್ತೀಯಲ್ಲ. ಮಕ್ಕೊ ಮಕ್ಕೋ ಎನ್ನುತ್ತ ತಾನೂ ಮಕ್ಕೊಂಡು ಮುಸುಕೆಳೆದ.

ಆವನ ಆ ಸ್ಥಿತಪ್ರಜ್ಞತೆಯನ್ನು ಕಂಡು ಹೊಟ್ಟೆ ಉರಿಯಿತು ವಿಪರೀತ ಕೋಪಬಂತು ತಾಳಿಕೊಂಡೆ.

ಗಾಳಿಯೇ ಇಲ್ಲದೆ ಬಯಲು ಸೀಮೆಯ ಆ ಕಗ್ಗತ್ತಲೆಯ ಭಯಾನಕ ರಾತ್ರಿಯಲ್ಲಿ ಇನ್ನೇನು ಕಣ್ಣಿಗೆ ಕಣ್ಣು ತಾಗಬೇಕು ಅಷ್ಟರಲ್ಲಿ ಒಮ್ಮೆಲೇ ಹತ್ತಾರು ಜೆಟ್

ವಿಮಾನಗಳು ಪ್ರಳಯಾಂತಕ ಸದ್ದು ಮಾಡುತ್ತ ಮೈಮೇಲೆ ಹಾರಿದಂತೆಯೂ, ನೂರಾರು ಮುಳ್ಳು ಹಂದಿಗಳೋ, ಕಣೀಹಂದಿಗಳೋ ನನ್ನ ದೇಹಕ್ಕೆ ತೆಕ್ಕೆ ಹಾಯ್ದು ನನ್ನ ದೇಹವನ್ನು ಕೋಸಂಬರಿಗೆ ಕೊಚ್ಚಿದಂತೆಯೂ ಆಗಿ ವೇದನೆಯನ್ನು ತಾಳದೇ.

"ಪರಮೇಶೀ" ಎಂದು ಕಿರುಚಿದೆ.

ನನ್ನ ದೋಸ್ತ ಗಾಬರಿಯಾಗಿ ನಿದ್ದೆಗಣ್ಣಿನಲ್ಲಿಯೇ ಎದ್ದು ಕುಳಿತು "ಏನಾಯ್ತೊ ?" ಎಂದ.

"ಥೂ...... ನಿನ್ನ ಒಂದೀಟ ಡೋಮಿ ತಡದರಯಷ್ಟ ಒದರ್‍ಯಾಡ್ತಿಲೇ" ಎಂದ.

"ಡೋಮಿ, ಎಂದೆ ಇನ್ನಷ್ಟು ಗಾಬರಿಯಲ್ಲಿ ಇದು ಯಾವ ರೆಪ್ಟೈಲ್ ಜಾತಿಯೋ ಆಫ್ರಿಕದ ಚೇಳೋ ಎಂದು ತಿಳಿಯದೆ.

ನನ್ನ ಅಜ್ಞಾನಕ್ಕೆ ಕನಿಕರಿಸುತ್ತ ಪರಮೇಶಿ ನನಗೆ ತಿಳಿಹೇಳಿದ.

"ಅಲ್ಲಪಾ ! ಏಕೀಕರಣ ಆಗಿಇಷ್ಟ ವರಸ ಆತು ಇನ್ನರು ನಿನ್ನ ಆ ಮೈಲಾಪೂರ ಖಂನಡ ಬಿಟ್ಟು ಒಂದೀಟು ಸುದ್ದ ಖಂನಡ ಕಲೀ......ಡೋಮಿ ಅಂದರ ಗುಂಗಾಡು ಅಂದ್ರ ಸೊಳ್ಳೆ, ಬೆಂಗಳೂರ ಖಂನಡದಾಗ ಮಾಸ್ಕಿಟೋ......ಅನಾಫಿಲೀಸ್ ತಿಳೀತ" ಎಂದ "ತಿಳೀತು ಪರಮೇಶಿ ತಿಳೀತು ಈ ಡೋಮಿಗಳು ಹೀಗೇ ನನ್ನ ರಕ್ತ ಕುಡೀತಾ ಇದ್ದರೆ ಬೆಳಿಗ್ಗೆ ಏಳೋ ಪ್ರಶ್ನೆಯೇ ಇಲ್ಲ "ಎಂದೆ.

ಏ ಸುಮ್ನ ಮಕ್ಕೊ ಹೊದಕೊಂಡು ಮುಂಜಾನೆ ಕೋಣ ಒದರುತ್ತಲೇ ಎಬ್ಬಿಸ್ತೇನಿ ಈಗ ಸಾಡೇ ಬಾರಾಕ್ಕ ಬಂತು ಮಕ್ಕೊ ಎನ್ನುತ್ತಾ ಮುಸುಕನೆಳೆದ ಮಹಾನುಭಾವ. ಅಂತೂ ನನ್ನ ಮರುದಿನದ ಪ್ರಯಾಣ ಕೋಣದ ಮೇಲೆಯೇ ಎಂದು ನಿಖರವಾಯಿತು. ಒಂದು ತೆರನಾದ ಹತಾಶತನವೂ ತಾಪವೂ ಉಂಟಾಯಿತು. ಉರಿದುಕೊಂಡೆ. ಮತ್ತು ಸಾಡೇ ಬಾರಕ್ಕ ಬಂದುದರಿಂದ ಸುದ್ದ ಕನ್ನಡದಲ್ಲಿ ಬಿದ್ದುಕೊಂಡು ಡೋಮಿಗಾಹುತಿಯಾದೆ.

* * * * *

ಕೆಲನಿಮಿಷಗಳಲ್ಲಿ ಮತ್ತೆ ಮುಳ್ಳು ಹಂದಿಗಳು ಜೇಟ್ ವಿಮಾನಗಳಲ್ಲಿ ಬಂದು ನನ್ನನ್ನು ಕೊಚ್ಚತೊಡಗಿದವು.

"ಪರಮೇಶೀ......"ಎಂದೆ.

"ಮತ್ತೇನಪಾ ನಿಂದು" ಎಂದ ತ್ರಸ್ತನಾಗಿ,

"ದನದ ಡಾಕ್ಟರ ಹತ್ತಿರ ಇಂಜೆಕ್ಷನ ಚುಚ್ಚಿಸಿಕೊಂಡಂಗ ಆಗತೈತೋ" ಎಂದೆ ದೈನ್ಯದಲ್ಲಿ.

ಪರಮೇಶಿಗೆ ನಿಜವಾದ ಕೋಪಬಂತು.

"ನೀ ಸುಮ್ನ ಮಕೋತಿಯಿಲ್ಲೋ...ಮಗನ ನಿಮ್ಮ ಬೆಂಗಳೂರಿನ ಸೊಳ್ಳೆ ಎಂ. ಎಸ್ ಸುಬ್ಬಲಕ್ಷ್ಮೀ ಹಂಗ ಪದ ಹಾಡತಾವೇನು. ಮಲ್ಲೇಶ್ವರದ ಮಾಸ್ಕಿಟೋ ಕಚ್ಚಿದರ ಹೇಮಮಾಲಿನಿ ಮುತ್ತಿಟ್ಟಂಗ ಆಗತೈತೇನು ? ಸುಮ್ನ ಮಕ್ಕೊ. ಈಗ ಇನ್ನೇನು ಕೋಣ ಒದರೋ ಹೊತ್ತಾತು" ಎಂದು ಬಿದ್ದುಕೊಂಡ.

ಮತ್ತೆ ಕೋಣ. ಅಯ್ಯೋ ರಾಮಾ ಎನ್ನುತ್ತ ತಲೆ ತಲೆ ಚಚ್ಚಿಕೊಂಡೆ ಸನ್ನಿ ತನದಲ್ಲಿ.

* * * * *

ಬಿದ್ದೂರಿನ ಈ ಭಯಾನಕ ದೋಮಿಗಳ ಹಾವಳಿಯಲ್ಲಿ ನನಗೆ ನಮ್ಮ ಮಲ್ಲೇಶ್ವರಂನ ಮಾಸ್ಕಿಟೋಗಳ ನೆನಪಾಗಿ ಒಂದು ತೆರನ Home sickness ಉಂಟಾಯಿತು, ಮಲ್ಲೇಶ್ವರದ ಸೊಳ್ಳೆಗಳದು ಏನು ನಯ ಏನು ಬಿನಪು, ಆಹಾ ! ಇನ್ನೇನು ಕಣ್ಣಿಗೆ ಕಣ್ಣುಹತ್ತಾಗುತ್ತದೆ ಎನ್ನುವಾಗ ಮೆಲ್ಲ ಮೆಲ್ಲನೇ ಮೃದು ಹೆಜ್ಜೆಯಲ್ಲಿ ಒಂದು ಕಿವಿಯ ಹಿಂದುಗಡೆ ಕಳ್ಳದನಿಯಲ್ಲಿ ಶಂಕರಾಭರಣದ್ದೋ ಕಾಫೀ ರಾಗದ್ದೋ ಒಂದು ತುಣು ಕನ್ನು ಮೆಲ್ಲ ಮೆಲ್ಲನೇ ಗುಣ ಗುಣಿಸುತ್ತಾ ನಿಮ್ಮ ಪ್ರತಿಕ್ರಿಯೆಗೆ ದಾರಿ ಕಾಯುತ್ತಾ ಒಮ್ಮೆ ಬಳಿ ಬಂದು, ಇನ್ನೊಮ್ಮೆ ದೂರ ಸಾಗಿ, ಒಮ್ಮೆ ಕಂಡು ಒಮ್ಮೆ ಕಾಣದಾಗಿ ಯಮುನೆಯ ತಟದಲ್ಲಿ ಗೋಪಿಕೆಯರನ್ನು ಗೋಳು ಹೊಯ್ಯುವ ಕಳ್ಳ ಕೃಷ್ಣನಂತೆ ಅಲ್ಲೆಗೈದು ನಿಮ್ಮ ಕಿವಿ, ಎಡ ಕೆನ್ನೆ ಕತ್ತುಗಳನ್ನೆಲ್ಲಾ ಕಚುಗಳಿ ಇಡುತ್ತವೆ. ನೀವು ಸ್ವಲ್ಪ ಕೈ ಎತ್ತಿದರೆ ಸಾಕು ಗಾವುದ ಗಾವುದ ಹಿಂದಕ್ಕೋಡುತ್ತವೆ. ಮತ್ತೆ ಸಮಯ ನೋಡಿ ಮೆಲ್ಲ ಮೆಲ್ಲನೇ ಸರಸಕ್ಕಿಳಿಯುತ್ತವೆ. ನೀವು ಗಂಭೀರರಾಗಿ ಸುಮ್ಮನೆ ಇದ್ದರೆ, ಅಭಿಯಾರಣ್ಯದ ಜಿಂಕೆಗಳಂತೆ ಮತ್ತೆ ಧೈರ್ಯ ತಾಳಿ ಒಂದೊಂದೇ ಸುತ್ತು ಸುತ್ತುತ್ತಾ ನಿಮ್ಮ ಬಳಿ ಬರುತ್ತವೆ. ಇನ್ನೂ ಸುಮ್ಮನಿದ್ದರೆ ಮೂರನೆಯ ನಾಲ್ಕನೆಯ ಸುತ್ತಿನಲ್ಲಿ ನಿಮ್ಮ ಕಿವಿಯ ಬಳಿ ಇಳಿದು ಕಿವಿಯ ಮೇಲು ಪದರನ್ನು ಮೆಲ್ಲನೇ ಕಚ್ಚುತ್ತವೆ.

'ಆಹಾ ಏನು ಸುಖ! ಏನು ಹಿತ'!

ನೀವು ಇನ್ನೇನು ನಿದ್ದೆಯ ಆಳಕ್ಕಿಳಿಯಬೇಕೆನ್ನುವಾಗ ನಿಮ್ಮ ಬಳಿ ಬಂದು ನಿಮ್ಮ ಕಿವಿಯನ್ನು ತುಟಿಯಲ್ಲಿ ಕಚ್ಚುತ್ತಿದ್ದ ನಿಮ್ಮ ಸರಸಿ ಹೆಂಡತಿಯನ್ನು ಹೇಗೆ ಮೆಲ್ಲನೇ "ಹೋಗೇ" ಎಂದು ತಳ್ಳುತ್ತೀರಲ್ಲವೇ ಹಾಗೇ ನೀವು ಸ್ವಲ್ಪ ತಳ್ಳಿದಾಗ ಅವರು ಮುನಿಸಿಕೊಂಡು "ಊಂ ... ಎಂದು ದೂರ ಸಾಗುತ್ತಾರಲ್ಲವೇ, ಹಾಗೆನೇ ಮಲ್ಲೇಶ್ವರದ ನಿಮ್ಮ ನೆಚ್ಚಿನ ಸೊಳ್ಳೆ ಕಚ್ಚಿದಾಗ ನೀವು ಕೊಂಚ ಮೈ ಅಲುಗಿಸಿದರೆ ಸಾಕು, ಅದು ಮುನಿಸಿಕೊಂಡು ಹನಿಗಣ್ಣಾಗಿ ದೂರದೂರಕ್ಕೆ,....... ....

'ನಿನಗಾಗಿ ಓಡೋಡಿ ಬಂದಿದ್ದೆ....... ನಾನು
ಮುಸುಕೆಳೆದೆ ಸೊಂಭೇರಿ ನೀನು...ಊ....ಊ,
ನಿನಗಾಗಿ .... ॥ ಪಲ್ಲ ॥
ಸರಸಕ್ಕೆ ಬಂದಿದ್ದೆ ನಾನು
ಅರಸಿಕನೋ ಬೇವಾರ್ಶಿ ನೀನು........ಮುಮು
॥ ಅನುಪಲ್ಲ ॥

....ಎಂದು ರಾಗವಾಗಿ ಹಾಡುತ್ತಾ ಹಾರುತ್ತವೆ.

ಅಂತಹ ನಯನಾಜೂಕಿನ ಒನಪು ವೈಯಾರದ ಆ ಸುಸಂಸ್ಕೃತಿ ಸೊಳ್ಳೆಗಳೆಲ್ಲಿ? ಈ ಬಿದ್ನೂರಿನ ಕಣೆ ಹಂದಿಗಳೆಲ್ಲಿ? ಎಂದು ಯೋಚಿಸಿ ಇನ್ನೇನು ನಿದ್ರೆ ಬಂದಿತೆಂದಾಗ "ಢ....ಣ್.... ಎಂದು ಒಂದೇ ಒಂದು ಗಂಟೆಯ ಸದ್ದಾಗಿ ಅದರ ಅಲೆಗಳು ರಾತ್ರಿಯ ನೀರವತೆಯನ್ನೆಲ್ಲ ಭೇದಿಸಿಕೊಂಡು, ಬಿದ್ನೂರಿನ ಈ ಸಮಯಾತೀತದ ಪ್ರಪಂಚಕ್ಕೂ ಸಮಯಾ ಸಮಯ ಉಂಟೆಂದು ಹೇಳಿಕೊಂಡು ತೇಲಿದವು.

"ಪರಮೇಶಿ" ಎಂದೆ

"ಊಂ" ಎಂಬ ಧ್ವನಿ ಬಂತು ಮುಸಿಕಿನಿಂದ.

"ಈ ಊರಾಗ ಗಡಿಯಾರನು ಇಲ್ಲಾ ಅಂತಿದ್ದೀ. ಮತ್ತೆ ಒಂದು ಗಂಟೆ ಹೊಡಿಯಿತಲ್ಲೋ" ಎಂದೆ ಅಂಜುತ್ತ ಅಳುಕುತ್ತ.

"ಗೌಡರ ಮನ್ಯಾಗ ತರತೇನಿ ಅಂತಿದ್ದರು ತಂದಾರೋ ಏನೋ" ಎಂದು ತನಗೂ ನನಗೂ ತಿಳಿಯದ ದನಿಯಲ್ಲಿ ನಿದ್ದೆ ಗಣ್ಣಲ್ಲಿ ಮರ್ಮರಿಸಿದ:

ಆ ಒಂದು ಗಂಟೆಯಿಂದ ನನ್ನ ಮಾನಸಿಕ ಉಲ್ಬಣ ಇನ್ನೂ ಹೆಚ್ಚಾಯಿತು. ಮಧ್ಯರಾತ್ರಿಯು, ಸಮಯ ಭಯಾನಕ ಕತ್ತಲೆ. ಗಡಿಯಾರದ ಒಂದೇ ಒಂದು ಗಂಟೆಯ ಸದ್ದು. ಅದು ಹನ್ನೆರಡು ಮುವತ್ತೋ, ? ಒಂದೋ ? ಒಂದೂ ಮುವತ್ತೆ ? ಅಥವಾ ಎಷ್ಟು ಮುವತ್ತೋ ? ಏನೂ ತಿಳಿಯದೇ ಮುಂದಿನ ಗಂಟೆಗೆ ಕಾತುರರಾಗಿ ಕಾಯುತ್ತಾ ಬಿದ್ದುಕೊಂಡ ಅನುಭವ ನಿಮಗೆಲ್ಲ ಇರಬಹುದು. ನೀವು ಕಣ್ಣು ಬಿಟ್ಟುಕೊಂಡು ತೊಲೆಗಳನ್ನೋ ಜಂತಿಗಳನ್ನೋ ಎಣಿಸುತ್ತಾ ಅಥವಾ ಕಣ್ಣು ಮುಚ್ಚಿಕೊಂಡು ಕುರಿಗಳನ್ನು ಕುಣಿಸುತ್ತಾ ಬಿದ್ದುಕೊಂಡಾಗ ಮುಂದಿನ ಗಂಟೆ ನಿಮ್ಮನ್ನು ಯುಗಯುಗಗಳವರೆಗೆ ಕಾಯಿಸುತ್ತಿದ್ದಾಗ ನಿಮಗೆ ಮೈಯಲ್ಲಿ ಪರಚಿ ಕೊಳ್ಳುವಂತಾಗುವದಿಲ್ಲವೇ. ನನಗೂ ಹಾಗೇ ಆಗಿ ನನ್ನ ಪಿತ್ತ ಕೆರಳತೊಡಗಿತ್ತು.

ಒಂದು ಕಡೆ ಜೆಟ್ ವಿಮಾನಗಳೂ ಮುಳ್ಳು ಹಂದಿಗಳೂ. ಇನ್ನೊಂದು ಕಡೆ ಒಮ್ಮೆ ತಾಳಬದ್ಧವಾಗಿ ಇನ್ನೊಮ್ಮೆ ತಾಳ ತಪ್ಪಿ ತಡೆ ತಡೆದು ಬರುತ್ತಿದ್ದ ಪರಮೇಶಿಯ ಗೊರಕೆ.

ಒಮ್ಮೆ ಮಂದ್ರಗತಿಯಲ್ಲಿ

ಒಮ್ಮೆ ಧ್ರುತದಲ್ಲಿ.

ಮೂರು ಮೂರು ಗೊರಕೆಗಳಿಗೊಮ್ಮೆ ತಬಲಾದ ಝಳುಕು.

ಅಯ್ಯೋ ನನ್ನ ಕರ್ಮವೇ ಈ ಬಿದ್ದೂರಿಗೆ ನಾನೇ ಬರಬೇಕಿತ್ತೇ ಎಂದು ತಲೆತಲೆ ಬಡಿದುಕೊಂಡೆ ಕೆರಳಿದ ಪಿತ್ತದಲ್ಲಿ.

ಅಂದಿನ ರಾತ್ರಿ ತ್ರೇತಾಯುಗದ ಗಂಟೆಯೇ ಕೊನೆಯ ಗಂಟೆಯಾಯಿತು.

ಒಮ್ಮೆಲೇ ಸನಿಹದಲ್ಲೆಲ್ಲೋ ಒಂದು ಕೋಳಿ ಭಯಾನಕವಾಗಿ ಬಿಟ್ಟೂ ಬಿಡದೇ "ಕೊ–ಕ್ಕೊ–ಕ್ಕೊ...ಕೆ–ಕ್ಕೆ–ಕ್ಕೆ–ಎಂದು ಒಮ್ಮೆಲೇ "ಖ್ಕ್ವ–ಖ್ಕ್ಯ ಎಂದು ಕೆಮ್ಮಿ ಶಾಂತವಾಯಿತು. ಅಂತೂ ಬೆಳಗಾಯಿತೆಂದುಕೊಂಡು

"ಪರಮೇಶೀ" ಎಂದೆ

ಗೊರಕೆಯ ಸದ್ದು ಮೆಲ್ಲಮೆಲ್ಲನೆ ಕಡಿಮೆಯಾಗುತ್ತಾ ಮಧ್ಯದಲ್ಲಿ ಬೆಂಗಳೂರಿ ನಲ್ಲಿ ನೀರಿಲ್ಲದೇ ಬರುವ ಬೇಸಿಗೆ ನಲ್ಲಿಯಂತೆ "ಸುಟರ್ಸ್sssssss ಫಟ್" ಎಂದು ಸದ್ದುಮಾಡಿ ಮೊದಲಿನ ಗತಿಗೇರಿತು.

"ಪರಮೇಶೀ....   ಎಂದೆ ಈ ಸಲ ಸ್ವಲ್ಪ ಗಟ್ಟಿಯಾಗಿ. ಪರಮೇಶಿ ಒಂದು ಸುತ್ತು ಈ ಬದಿಯಿಂದ ಆ ಬದಿಗೆ ಹೊರಳಿ ಕಣ್ಣು ತೆರೆದು ಬಾಯಿ ಮುಚ್ಚಿಕೊಂಡ.

"ಏಳೋ ಬೆಳಗಾಯಿತು ಕೋಳಿ ಕೂಗಿತು" ಎಂದೆ.

"ಅಧೆಂಗ ಕೋಳಿ ಕೂಗತದಲೇ ಇನ್ನೂ ಕೋಣನ್ಸ ಒದರಿಲ್ಲ" ಎಂದ.

"ಇದೀಗ ನಾನೇ ಕೇಳಿದೆ ಮಹಾರಾಯ ನಿಜವಾಗಿಯೂ ಕೋಳಿಕೂಗಿತು" ಎಂದೆ.

"ಹೆಂಗ ಕೂಗಿತು ಹೇಳು" ಎಂದಾ

ನನ್ನ ತಾಳ್ಮೆಗೂ ಒಂದು ಮಿತಿಉಂಟಲ್ಲವೇ ನಾನು ಕಿರುಚಿಕೊಂಡೆ.

"ಹೆಂಗ ಕೂಗಿತಂದ್ರ, ಕಂಠೀರವ ಸ್ಟೇಡಿಯಂದಾಗ ಕೆಟ್ಟು ಹೋದ 'ಮೈಕಿ' ನಲ್ಲಿ ನೆಗಡಿಯಾದ ಗುಂಡೂರಾಯರು ಮಾಡಿದ ಭಾಷಣದಂತಿತ್ತು.

"ಹಂಗಾರ ಅದಲ್ಲೇಳು" ಎಂದ ಪರಮೇಶಿ ನಿರಾಸಕ್ತಿಯಿಂದ.

"ಏನೋ ಹಂಗಂದ್ರ ?" ಕೇಳಿದೆ ತಿಳಿಯದೇ.

"ನೋಡು ಬಾಜೂದ ಮನ್ಯಾಗ ಹಾರೂರಾವ ರಾಮಭಟ್ಟ ಇರತಾನ, ಅವರು ಅವಾಗೀವಾಗ ಕೋಳಿ ತಿಂತಾರ, ಮಂದಿಗೆ ಗೊತ್ತಾಬಾರದಂತ ರಾತ್ರಿ ಕ್ಕೋಳಿ ಕೊಯ್ತಾರ, ಪಾಪ. ನಿದ್ದೀ ಮಾಡತಿರತಾವ ಕೋಳಿ, ಅವನ್ನೆಬ್ಬಿಸಿ ಕುತಿಗೆ ಕೊಯ್ದರ ಹಂಗ ಧನೀ ತಗೀತಾವ, ತಿಳೀತಲ್ಲೊ, ಇನ್ನರ ಸ್ವಲ್ಪ ನಿದ್ದೆ ಮಾಡು ಮಹಾರಾಯ ಕೋಣ ಒದರೋ ಟೈಮ ಆಗಾತ ಬಂತು" ಎಂದು ಬಿದ್ದುಕೊಂಡ.

ಅಂತೂ ನಿದ್ದೆಯಲ್ಲಿದ್ದ ಕೋಳಿಗೂ ಗುಂಡೂರಾಯರಿಗೂ ಇರುವ ಈ ಬಾದರಾಯಣ ಸಂಬಂಧವನ್ನು ನೆನೆಯುತ್ತಾ ಮಲಗಿದೆ.

*   *   *   *   *

ಮೂಡಣದ ಕಿಟಕಿ–ಇರುವದೊಂದೇ ಕಿಟಕಿ–ಯಿಂದ ಒಮ್ಮೆಲೇ ಪ್ರಕಾಶ ಮಾನವಾದ ಬೆಳಕು ತೂರಿಬಂತು. ಕೆಂಪು ಕೆಂಪಾಗಿ ಉಜ್ವಲ ಪ್ರಕಾಶ ಕೊನೆಗೂ ಗೆದ್ದೆ. ಸೂರ್ಯೋದವಾಯಿತೆಂದು ಎದ್ದೆ.

"ಪರಮೇಶೀ" ಎಂದೆ

"ಛೇ–ಛೇ–ಥೂ–ಪಿಟ್ ಇತ್ಯಾದಿಗಳ ಒಂದು ಸಮ್ಮಿಶ್ರ ಸ್ವರವನ್ನು ಹೊರಡಿಸುತ್ತಾ ಕೊನೆಗೆ "ಮತ್ತೇನಪಾ" ಎಂದ.

"ಬೆಳಗಾಯಿತು ಏಳು" ಎಂದೆ.

"ಅಧೆಂಗೆ ಬೆಳಗಾಗತಲೇ ಇನ್ನೂ ಕೋಣನ ಒದರಲಿಲ್ಲ" ಎನ್ನುತ್ತ ಕಣ್ಣು ತಿಕ್ಕುತ್ತ ಎದ್ದು ಕುಳಿತ.

"ನೋಡು ಖೋಲಿ ತುಂಬ ಬೆಳಕು–ಸುರ್ಯೋದಯ....... ಎಂದು ನಾನು ಹೇಳುತ್ತಿದ್ದಂತೆಯೇ ಪರಮೇಶಿ ಕಿಟಕಿಯ ಬಳಿ ಬಂದು ಹೊರಗೆ ಹಣಿಕಿಕ್ಕಿದ ಮತ್ತೆ ಮರಳಿಬಂದು ಕಾಲಿನಿಂದ ಚಾದರವನ್ನೆಳೆದುಕೊಳ್ಳುತ್ತಾ ತೃಪ್ತನಾಗಿ ಗೊಣಗಿದ.

"ನಿಮಗ ಶಾರದೂರವರಿಗೆ ಬುದ್ಧಿಗಿದ್ಧಿ ಆಯಿತೋ ಇಲ್ಲೋ ಸೂರ್ಯೋದಯ ಹೀಂಗ್‌ರತ್ತೈತೇನ್ನು......

"ಮತ್ತ ಅದೇನು" ಎಂದು.

"ಹುಚ್ಚಾ! ಇಲೆಕ್ಶನ್ ಟೈಮ್ನ್ಯಾಲಿ, ಇರುದ್ದ ಪಾರ್ಟಿಯವರು ಒಬ್ಬರಿಗೊಬ್ಬರ ಬಣವಿ ಸುಡಾಕ ಹತ್ಯಾರ–ಅದರ ಬೆಳಕಿದು" ಎನ್ನುತ್ತ ನನ್ನ ಅಜ್ಞಾನಕ್ಕೆ ವ್ಯಗ್ರನಾಗಿ ಮತ್ತೆ ತನ್ನ ನಿದ್ರಾಸಂಗೀತವನ್ನು ಪ್ರಾರಂಭಿಸಿದ.

ಆಯುಷ್ಯವನ್ನೆಲ್ಲ ಕೇವಲ ಋತುಚಕ್ರಗಳಲ್ಲಿ ಬಹಳವಾದರೆ ಹಗಲು ರಾತ್ರಿಗಳಲ್ಲಿ ಮಾತ್ರ ವಿಂಗಡಿಸಿಕೊಂಡಿರುವ ಬಿದ್ನೂರಿನ ಈ ಸುಖೀ ಪ್ರಜೆಗಳೆತ್ತ, ಗಳಿಗೆಗೊಮ್ಮೆ ಕೈಗಡಿಯಾರ ನೋಡಿಕೊಳ್ಳುತ್ತ ಕಳೆದು ಹೋಗುತ್ತಿರುವ ಜೀವನದ ಕ್ಷಣಗಳನ್ನು ನಿರರ್ಥಕವಾಗಿ ಎಣಿಸುತ್ತಾ ಎಟೆಗೆಡುತ್ತಿರುವ ನಾನೆಲ್ಲಿ, ಎಂದು ವ್ಯಥಿತನಾದೆ. ಆದರೂ ಬೆಳಿಗ್ಗೆ ಏಳಲೇಬೇಕಲ್ಲ. ಬಿದ್ನೂರಿನ ಮೇಲೆ ಹಾಯುವ ಬೆಂಗಳೂರ ಬಸ್ಸನ್ನು ಹಿಡಿಯಲೇ ಬೇಕಲ್ಲ. ಇಲ್ಲದಿದ್ದರೆ ಇನ್ನೊಂದು ರಾತ್ರಿ ಕೋಸಂಬರಿಯಾದೇನಿಲ್ಲಿ ಎಂದು ಚಿಂತಿತನಾದೆ.

ಏನೇನೊ ವಿಚಾರ–ಚಿಂತೆ–ಬಣಿವೆಗಳನ್ನೆಲ್ಲ ಸುಟ್ಟು ಬಿಟ್ಟರೆ ದನಗಳಿಗೆ ಜಾಹುಲ್ಲು ಸಿಗುವದೆಂತು? ಎಂದಮೇಲೆ ಬಿದ್ನೂರಿನ ಆ ಟೈಮ್ ಕೀಪರ ಕೋಣಕ್ಕೆ ಆಹಾರವೆಲ್ಲಿ? ಆಹಾರವೇ ಇರದಿದ್ದರೇ ಅದು ಒದರುವದೇನು...ಅದು ಒದರ

ದಿದ್ದರೆ ...ಆರು ಗಂಟೆ......ರಿಂದವ್ವ ಹಾರೂರ ಮುದಕಿ......ಬೆಂಗಳೂರು ಬಸ್ಸು......ಎಂದು ಗಾಬರಿಯಲ್ಲಿ ಭೀತತಂದ್ರಿಯಲ್ಲಿ ಮುಳುಗಿದಾಗ ಕಣ್ಣು ಎಳೆದೆಳೆದು ಕೊಂಡು ಬೆಳಗಿನ ಯಾವದ ಅರ್ಧ ನಿದ್ರೆ ಸುಷುಪ್ತಿಯಂತಹ ಅವಸ್ಥೆಯಲ್ಲಿ ಏನೇನೋ ಹರಕು ಹರಕು ತುಣುಕು ತುಣುಕು ಕನಸುಗಳು.

......ಆಫ್ರಿಕಾ ಖಂಡದ ಯಾವದೋ ಒಂದು ಘನಘೋರವಾದ ಕಾಡಿನಲ್ಲಿ ಬೇಟೆಗಾರರ ಸಫಾರಿ ತಂಡವೊಂದರ ಸೇವಕನಾಗಿ ನಾನು ತಲೆಯ ಮೇಲೆ ಮತ ಪೆಟ್ಟಿಗೆಯನ್ನು ಹೊತ್ತುಕೊಂಡು ಅವರ ಹಿಂದೆ ಹಿಂದೆ ಹೊರಟಿದ್ದೆ. ಇಕ್ಕಟಾದ ಮುಗ್ಗಟಾದ ದಾರಿ. ಒಮ್ಮೆಲೇ ಎದುರಿನಿಂದ ಹತ್ತಿಪ್ಪತ್ತು ದೈತ್ಯಕಾರದ ಕಾಡು ಕೋಣಗಳು ಮೆಲ್ಲ ಮೆಲ್ಲಗೆ ಧೀರ ಗಂಭೀರ ಗತಿಯಲ್ಲಿ ನಮ್ಮತ್ತಲೇ ಬರುತ್ತಿದ್ದವು. ಕೋವಿಹಿಡಿದ ಸಫಾರಿಗಳು ನನ್ನೊಬ್ಬನನ್ನೇ ಬಿಟ್ಟು ಸರಸರನೇ ಮರವೇರಿದರು ಇನ್ನೇನು ನಾನು ತಲೆಯ ಮೇಲಿನ ಮತಪೆಟ್ಟಿಗೆಯನ್ನು ಕೆಳಗೆ ಹಾಕಿ ಓಡ ಬೇಕೆಂದಾಗ ಪೆಟ್ಟಿಗೆಯ ಒಂದು ಮೊಳೆಗೆ ಸಿಕ್ಕು ಕೈಗಡಿಯಾರ ಜಜ್ಜಿ ಹೋಯಿತು, ಕೋಣಗಳು ತೀರ ಸಮಿಪಕ್ಕೆ ಬಂದಿದ್ದವು. ಒಂದು ರಾಕ್ಷಸಕೋಣವಂತೂ ಕೆಂಗಣ್ಣಿನಿಂದ ನನ್ನನ್ನೇ ನೋಡುತ್ತ ಕಾಲುಗಳಿಂದ ನೆಲ ಕೆದರುತ್ತ ಕೋಡುಗಳನ್ನು ಕೆಳಗಿಳಿಸಿ ಇನ್ನೇನು 'ಚಾರ್ಜ' ಮಾಡಬೇಕು, ನನ್ನ ಮೈಬೆವೆತು ತೆರೆದ ಬಾಯಿಂದ ಧ್ವನಿ ಹೊರಡದೇ ಕಿರುಚಿಕೊಳ್ಳುತ್ತಿದ್ದೆ. ಅಷ್ಟರಲ್ಲಿ ನೂರಾರು ಸಾವಿರಾರು ಬಿದ್ದೂರ .ಡೋಮಿಗಳು ಕಾಡುಕೋಣಗಳ ಮೇಲೆ ದಾಳಿಯಿಟ್ಟವು. ಈ ಅನಿರೀಕ್ಷಿತ ದಾಳಿಗೆ ಕಂಗೆಟ್ಟು ಕೋಣಗಳೆಲ್ಲ ವಿಕಾರಿವಾಗಿ ಧ್ವನಿತೆಗೆಯುತ್ತ ದಾರಿ ಸಿಕ್ಕತ್ತ ಓಡತೊಡಗಿದವು ಎಷ್ಟೋಕೋಣಗಳು ನನ್ನನ್ನು ಕೆಡವಿ ಕೋಡುಗಳಿಂದ ನನ್ನ ಪಕ್ಕೆಗಳನ್ನು ತಿವಿತಿವಿದು ಓಡುತ್ತಿದ್ದವು.

*   *   *   *

ಕನಸು ಒಡೆದಾಗ ಪರಮೇಳಿ ನನ್ನ ಪಕ್ಕೆಗಳನ್ನು ತಿವಿತಿವಿದು ಎಬ್ಬಿಸುತ್ತಿದ್ದ.

"ಏಳಲೇ ಕೋಣ ಒದರಿತು ಕೇಳಸಲಿಲ್ಲೇನಾ?" ಎಂದ. ಎದ್ದವನೇ ಬೇಗನೇ ಬಸ್ಸಿಗೆ ಓಡಿದೆ. ರಾತ್ರಿಯೆಲ್ಲಿ ನಿದ್ದೆಯಿಲ್ಲ. ಈ ಡೋಮಿಗಳು ಬೇರೆ. ಈಗ ಗಂಟೆ ಎಷ್ಟೋ ತಿಳಿಯದು. ರಾತ್ರಿ ಒಂದು ಗಂಟೆಯ ಮೇಲೆ ಬೇರೆಗಂಟೆಕೇಳಿಲ್ಲ ಬಸ್ಸು ಎಲ್ಲಿ ನಿಲ್ಲುತ್ತದೋ ಎಲ್ಲಿ ತಪ್ಪಿಹೋಗುತ್ತದೋ ಎಂದು ನರ್ವಸ್ಸನಾದೆ, ಎಂಕ್ಷೈಂಟಿತನಾದೆ.

ನನ್ನ ಹಾಲತ್ತಿಗೆ ನಾನೇ ಕನಿಕರಿಸ ತೊಡಗಿದ್ದೆ, ಬೀದಿಯಲ್ಲಿ ಎದುರು ಮನೆಯ ಹಾರೂರ ಮುದಿಕಿ ರಿಂದವ್ವ ಮನೆಬಾಗಲಿಗೆ ರಂಗೋಲಿಇಕ್ಕುತ್ತ 'ಏಳಯ್ಯಾ

ಗೋಪಾಲ "ಸ್ನೇಷ್ಟು ನಿದ್ರೆ...... ಎಂದು ಹಾಳತಾದ ಸೂಜಿಯಲ್ಲಿ ಹಾಳಾದ ಗ್ರಾಮಫೋನು ರೆಕಾರ್ಡಿನಂತೆ ಕಿರುಚುತ್ತಿದ್ದಳು. ಈ ದೋಮಿಗಳ ಹಾವಳಿ ಅದಾ ವ ಸೂ...... ಮಗ ಗೋಪಾಲ ಮಲಗುತ್ತಾನೆ' ಎಂದುಕೊಳ್ಳುತ್ತಾ "ಅಮ್ಮಾ ಬೆಂಗಳೂರ ಬಸ್ಸು ಯಾ ವ ಕ ಡೆ ಬರುತ್ತದೆ?" ಎಂದು ಕೇಳಿದೆ ರಿಂದವ್ವನನ್ನು. "ತಮ್ಮಾ ಇದೇ ರಸ್ತೆ ಹಿಡಿದು ಒಂದೆರಡು ಮೂರು ಮೈಲು ನಡೀತಾ ಹೋದರ ಬಿದ್ದೂರ ಕತ್ತರಿ (cross) ಹತ್ತರ ಏಳುಗಂಟೆಗೆ ಬೆಂಗಳೂರ ಬಸ್ಸು ಬರ್ತದ"

"ಎರಡು-ಮೂರು ಮೈಲಿ... ಬಿದ್ದೂರ ಕತ್ತರಿ" ಎನ್ನ ಎದೆ ಹೊಡೆದುಕೊಳ್ಳ ತೊಡಗಿತು.

"ಅಮ್ಮಾ ಈಗ ಗಂಟೆ ಎಷ್ಟಾಗಿರಬಹುದು' ಎಂದೆ.

"ಆರನಕಾ ಹೊಡೆಯಿತಲ್ಲ ತಮ್ಮಾ ಈಗಿನ್ನೂ ಒದರಿತ್ತು ಕೋಣ" ಎಂದಳಾ ರಿಂದಿ.

ನನಗೆ ಹುಚ್ಚು ಹಿಡಿಯುವದೊಂದೇ ಬಾಕಿ.- ಎರಡು ಮೂರು ಮೈಲು ನಡೆಯಲು ಎಷ್ಟು ಸಮಯ ಬೇಕಾಗಬಹುದು. ಬಿದ್ದೂರಿನ ಕತ್ತರಿ ಎಲ್ಲಿ exact ಆಗಿ ಬರುತ್ತದೆ. ಒಂದು ವೇಳೆ ಈ ಗೌಡರ ಕೋಣ ಇವತ್ತು ಆರರ ಬದಲು ಏಳಕ್ಕೆ ಒದರಿದ್ದರೆ, ಏನುಗತಿ...ಇದೇನು ಅವಸ್ಥೆ ತಂದೆ ದೇವಾ ಎಂದು ಕೊಳ್ಳುತ್ತಾ ...ಮಮ್ಮಲ ಮರಗುತ್ತಾ, ಇದೊಂದು ಸಲ ಬೆಂಗಳೂರು ತಲುಪಿದರೆ ಸಾಕು ಮಾರಮ್ಮನಿಗೆ ಕೋಣನ ಬಲಿ ಕೊಡುತ್ತೇನೆಂದು ಬೇಡಿಕೊಂಡೆ...ಆದರೂ ಸಮಾಧಾನವಿಲ್ಲ. ಎರಡು ಮೂರು ಮೈಲು ನಡೆಯಲು ಎಷ್ಟು ಸಮಯ ಬೇಕು ?... ಈಗ ವೇಳೆ ಎಷ್ಟು ? Time Please.... Time Please.... Time Please— ಎಂದು ದೇಹದ ನರ ನರಗಳೆಲ್ಲ ಒಕ್ಕೊರಲಿನಿಂದ ಕೂಗತೊಡಗಿದವು.

"ಅಮ್ಮಾ ಎಂದೆ ರಿಂದವ್ವನಿಗೆ

"ತಮ್ಮಾ ಎಂದಳಾ ತಾಯಿ

"ಈ ಊರಾಗ ಎಲ್ಲೂ ಗಡಿಯಾರ ಇಲ್ಲೇನ್ರೀ" ಎಂದೆ ಕರುಣಾಪೂರಿತ ದನಿಯಲ್ಲಿ.

"ಯಾಕಿಲ್ಲ ತಮ್ಮಾ. ಮೊನ್ನಿನ್ನೂ ಗೌಡರ ಮನ್ಯಾಗ ಹುಬ್ಬಳ್ಳಿಯಿಂದ ಒಂದು ದೆವ್ವದಂತಹ ಗಡಿಯಾರ ತಂದು ಗೋಡೆಗೆ ಬಡದಾರ ನೋಡು. ಇಲ್ಲೇ ಮುಂದಿನ ಮನೀನ ಗೌಡರ ಮನಿ" ಎಂದಳು.

ಈ ಅಮೃತವಾಣಿಯನ್ನು ಕೇಳಿ ನನ್ನ ಎಲ್ಲ ಕಷ್ಟಗಳನ್ನೂ ಆ ಕ್ಷಣಕ್ಕೆ ಮರೆತು ದುಃಖಗಳನ್ನು ನುಂಗಿ ಗೌಡರ ಮನೆಗೆ ನುಗ್ಗಿದೆ. ಗೌಡರು ಹೊರಗಿನ ಕಟ್ಟೆಯ ಮೇಲೆ ಬೇವಿನ ಕಡ್ಡಿಯಿಂದ ಹಲ್ಲುಜ್ಜುತ್ತ ನಿಂತಿದ್ದರು.

"ಗೌಡರೇ" ಎಂದೆ.

"ಯೇನು ಸಾಯೇಬ್ರsss ಎಂದರು.

"ನಿಮ್ಮ ಮನ್ಯಾಗ ಗಡಿಯಾರ ಆಯಿತೇನ್ರೀ" ಎಂದೆ ದೈನ ದಲ್ಲಿ.

"ಆಯಿತಲ್ರೀ...ಮೊನ್ನಿನ್ನೂ ಹುಬ್ಬಳ್ಳಿಯಿಂದ ತಂದೇವಿ" ಎಂದು ಎದುರಿನ ಗೋಡೆಯನ್ನು ತೋರಿಸಿದರು. ಅಲ್ಲಿ ಗೋಡೆಯ ಮೇಲೆ ದೊಡ್ಡದಾದ ದುಂಡು ಮುಖದ ತೂಗುವ ಪೆಂಡ್ಯೂಲಮ್ಮಿನ ಗಡಿಯಾರ ರಾರಾಜಿಸುತ್ತಿತ್ತು.

ನಾನು ಭಯ ಭಕ್ತಿಯಿಂದ, ಭಾವಾವೇಗದಲ್ಲಿ ಗಡಿಯಾರಕ್ಕೆ ಕೈ ಮುಗಿದು ನಿಂತಲ್ಲಿಯೇ ಒಂದು ಪ್ರದಕ್ಷಿಣೆ ಸುತ್ತಿದೆ. ಆರು ಗಂಟೆಯಾಗಿ ಹತ್ತು ನಿಮಿಷ ಗಳಾಗಿತ್ತು. ನನ್ನ ಕೈ ಗಡಿಯಾರವನ್ನು ಸರಿಯಾಗಿ adjust. ಮಾಡಿಕೊಳ್ಳುತ್ತಾ ಭಾರವಿಳಿದ ನಿಟ್ಟುಸಿರಿನಲ್ಲಿ, ಗೆಲುವಿನ ಸಂತಸದಿಂದ ಗೌಡರನ್ನು ಕೇಳಿದೆ.

"ಗೌಡರೇ ಗಡಿಯಾರ ಕರೆಕ್ಟ ಆಯಿತಲ್ಲರೀ"

ಗೌಡರಿಗೆ ಕೋಪ ಬಂತು.

"ಏನ್ರೀ ಸಾಯೇಬ್ರ ಹಿಂಗ ಕೇಳ್ತೀರಿ, ಹೊಸಾದು...ಎರಡು ದಿವಸಾತು ಹುಬ್ಬಳ್ಳಿಯಿಂದ ತಂದು...ನಿನ್ನೆ ಕೀಲಿ ಕೊಡಾಕ ಮರೆತಿದ್ದೆ ರಾತ್ರಿ ಒಂದು ಗಂಟೆಗೆ ಬಂದು ಬಿದ್ದಿತ್ತು, ಈಗಿನ್ನೂ ಕೋಣ ಒದರೂತಲೇ ಆರು ಗಂಟೆಗ ಕರೆಕ್ಟಾಗಿ ಅಡ್ಜೆಸ್ಟ್ ಮಾಡಿಟ್ಟೇನಿ...ಮತ್ತೂ ಕರೆಕ್ಟ ಆಯಿತೇನ ಅಂತ ಕೇಳತೀರಲ್ಲರೀ"

ನನ್ನ ಕಣ್ಣು ಕತ್ತಲೆ ಕವಿಯಿತು. ತಲೆ ಕಾಯ್ದು ಇನ್ನೇನು ಸಿಡಿಯುವಂತಾಯಿತು. ಸಿಟ್ಟು, ಕೋಪ, ಸನ್ನಿ, ತಲೆತಿರುಕತನಗಳೆಲ್ಲ ಒಮ್ಮೆಲೇ ಒಟ್ಟುಗೂಡಿ ಒಂದರ ಮೇಲೊಂದರಂತೆ ಪೈಪೋಟಿ ನಡೆಸಿ ಮುಗಿಬಿದ್ದವು. ಪರಿಸ್ಥಿಯ ಹತಾಶತನ ನನ್ನ ದೈನ್ಯಾವಸ್ಥೆಯನ್ನು ಹೆಚ್ಚಿಸಿತು ಸಾತ್ವಿತ– ಸಂತಾಪದಲ್ಲಿ ನನ್ನ ಕುತ್ತಿಗೆಯ ನರಗಳು ಉಬ್ಬಿದವು. ಕಂಠಬಿಗಿಯಿತು ದನಿ ನಡುಗತೊಡಗಿತು. ತಡೆ ಹಿಡಿದು ಬಿಕ್ಕುಗಳು ಬಂದವು ಕಣ್ಣುಗಳಲ್ಲಿ ಒಮ್ಮೆಲೇ ಗಂಗೆ ಉಕ್ಕಿದಳು. ಮೊದಲು ಮೆಲ ಮೆಲನೇ ಆಮೇಲೆ ವೇಗವನ್ನು ಹೆಚ್ಚಿಸಿ ಒಮ್ಮೆ ಎಡಗೈ, ಇನ್ನೊಮ್ಮೆ ಬಲಗೈಯಾಗಿ ನನ್ನತೆರೆದ ಬಾಯಿಯ ಮೇಲೆ ಕುಟ್ಟುತ್ತOh God Oh God ಎಂದು ಇಂಗ್ಲಿಷಿನಲ್ಲಿ ಶಂಖವಾದ್ಯ ಮಾಡುತ್ತ ಅಲ್ಲಿಂದ ನಾಗಾಲೋಟದಲ್ಲಿ ಓಟಕಿತ್ತೆ ಬಿದೂರಿನ ಕತ್ತಲಿಗೆ·

ಚುನಾವಣೆಯ ನಂತರ......



“ಕುರುಚಲು ಗಡ್ಡನಾದರೂ ಬಿಟ್ಟಿದ್ರೆ ಠೇವಣಿ ಉಳೀತಿತ್ತೇನೋ ?”

ಪ್ರಶ್ನೋತ್ತರ

ಲೀಲಾ ಮಿರ್ಲೆ—

ನೆನ್ನೆ ಮಧ್ಯಾಹ್ನ ಬೊಂಡಾ ಮಾಡೋಣ ಅಂತ ಕಡಲೆ ಹಿಟ್ಟಿನ ಪೊಟ್ಟಣ ಬಿಚ್ಚಿದೆ. ಇನ್ನೇನು ಪೊಟ್ಟಣ ಕಟ್ಟಿದ ಕಾಗದಾನ ಕಸದ ಡಬ್ಬಕ್ಕೆ ಹಾಕಬೇಕು. ಅಷ್ಟರಲ್ಲಿ ಆ ಕಾಗದದ ಮೇಲೆ ಬರೆದ ವಾಕ್ಯಗಳು ನನ್ನ ಕಣ್ಣಿಗೆ ಬಿದ್ದವು. ಪ್ರಶ್ನೊತ್ತರಗಳಿದ್ದ ಹಾಗೆ ಇತ್ತು. ಕುತೂಹಲದಿಂದ ಓದಿದೆ. ಯಾವುದೋ ಸಂಪಾದಕರ ಫೈಲ್ ಅಥವ ಕಸದ ಬುಟ್ಟಿಯಿಂದ ಬಂದಿರಬೇಕು. ಪ್ರಶ್ನೋತ್ತರಗಳು ಹೀಗೆ ಸಾಗಿದ್ದವು—

1. ಮೋಹನ್‌ದಾಸ್, ರಾಜೀವಪುರ

   ಸ್ವಾಮಿ, ಭೂಲೋಕದಲ್ಲಿ ಏಕೆ ಇಷ್ಟೊಂದು ಹೊಡೆದಾಟ ?

   —ಶಾಂತಿಸ್ಥಾಪನೆಗೆಂದು

2. ಹರೀಶ್ ಚಂದ್ರ, ಶ್ರೀರಾಂಪುರಂ

   'ಸತ್ಯಮೇವ ಜಯತೆ' ಟೀಕಿಸಿ ಗುರೂ.

   —ವಾಕ್ಯದ ನಂತರ ಪೂರ್ಣ ವಿರಾಮದ ಬದಲು ಪ್ರಶ್ನಾರ್ಥಕ ಚಿನ್ಹೆಯನ್ನು ಉಪಯೋಗಿಸಬೇಕು ಮಿ. ಚಂದ್ರ

3. ತಂಗಮಣಿ, ಕೆ.ಜಿ.ಎಫ್.

   ಗೃಹಸ್ಥಾಶ್ರಮದ ಬಗ್ಗೆ ನಿಮ್ಮ ಅನುಭವವೇನು ?

   —'ಹಾವು ಕಚ್ಚಿದರೆ, ಜೀವ ಹೋಗ್‌ತ್ಯೆತೆ ಆದ್ರೆ ಪ್ರಾಣ ಉಳೀತ್ಯೆತೆ' ಅಂತ ಹಾವಾಡಿಗರು ಹೇಳುವುದು ಜ್ಞಾಪಕಕ್ಕೆ ಬರುತ್ತೆ, ತಂಗಿ

4. ಅಬ್ದುಲ್ಲಾ, ಮುನಿರಾಬಾದ್

   'ಶಿಥಿಲ' ಎನ್ನುವ ಪದದ ಅರ್ಥವೇನು ಸಾರ್ ?

   —'ಪೂರ್ಣವಾಗಿ ಜೀರ್ಣವಾದದ್ದು ಎಂದು. ಉದಾಹರಣೆಗೆ—ಒಂದು ರೂಪಾಯಿನ ನೋಟು

5. ಮಹದೇವ, ಕಲ್ಲಿನಗುಡಿ
ದೇವರು ಒಬ್ಬನೇ ಎನ್ನುವುದು ನಿಜವೇ ?

—ಸಂಶಯವೆಲ್ಲಿ ಬಂತು ಮಾರಾಯ್ರೇ. ಭೂಲೋಕದ ಸ್ಥಿತಿ ನೋಡಿದರೆ ತಿಳಿಯುತ್ತಲ್ಲಾ. ಅವನು ಒಬ್ಬನೇ, ಆತನಿಗೆ following ಶುದಾಗಿಲ್ಲ ಎನ್ನುವುದು !

6. ಮಿಸ್ ಪಿಂಕಿ, ಬೆಟಲ್‌ಡುರ್ಗ್
ನೀವು Mr. Know All, ಅಂತಾರಲ್ಲಾ, floorನ ಹ್ಯಾಗ್ tidy ಮಾಡೋದು ತಿಳಿಸಿ ಅಂಕಲ್.

—First ಗುಡ್ಸಿಂಗ್ ನಂತರ ಸಾರ್ನಿಂಗ್ ಮಾಡಿ ಮಿಸ್.

7. ಗುಂಡ್ಯಾಯ, ದೊಡ್ಡೂರು
ನಮ್ಮೂರಿನ ಹಿರಿ ಅಧಿಕಾರಿಗಳೊಬ್ಬರಿಗೆ ಸೆಕ್ಯೂರಿಟಿ ಗಾರ್ಡ್ ಕೊಟ್ಟರೂ, ಆತ 'ಬೇಡ, ಬೇಡ' ಎನ್ನುತ್ತಾರಲ್ಲಾ ಏಕೆ ?

—ಪಾಪ; ಜೀವದ ಮೇಲಿನ ಆಸೆ ಸ್ವಾಮಿ.

8. ಪಾಪ, ಹಾಳ್‌ಬಾವಿ
ನಮ್ಮ ತಂದೆ ತಾಯಿ ಸದಾ ಜಗಳವಾಡುತ್ತಿರುತ್ತಾರೆ. ನಾನು ಯಾರ ಪಕ್ಷ ಸೇರಲಿ ?

—ಪಿತೃಪಕ್ಷ

9. ಎಸ್. ಧಾಮ, ಅವಲಹಳ್ಳಿ,
ಹಣದ ಉಬ್ಬರ ಮುಂದಕ್ಕೆ ಸುಧಾರಿಸುತ್ತದೆ ಅಂತಿರಾ ?

—ಹ್ಯಾಗೆ ಸಾಧ್ಯ. ಅದು ಲಕ್ಷಮ್ಮನಿಗೆ ಬಡಿದಿರುವ terminal ವ್ಯಾಧಿ. 'ತಿಂಡಿ ಆಯಿತೇ' ಅಂತ ಇವರು ಕೂಗಿದಾಗ ಅನ್ನಿಸಿತು, ಇನ್ನು ಮೇಲೆ ಪೊಟ್ಟಣದ ಪೇಪರ್ ಓದಿ ನಂತರ ತಿಂಡಿ ಮಾಡಬೇಕು. ಆಗ ತಿಂಡಿ ಮಾಡುವ ಬೋರ್ ಸ್ವಲ್ಪ ಕಮ್ಮಿಯಾಗತ್ತೆ ಅಲ್ವೆ ?

29

ನಮ್ಮ ಹಳ್ಳಿಯ ಕವಿ ಸಮ್ಮೇಳನ

—ಭುವನೇಶ್ವರಿ ಹೆಗಡೆ

ದಿಲ್ಲಿಗಳಲ್ಲೇ ಯಾವಾಗಲೂ ಸಾಹಿತ್ಯ ಸಮ್ಮೇಳನ ಕವಿ ಸಮ್ಮೇಳಗಳು ನಡೆಯುತ್ತಿರುವಾಗ ಹಳ್ಳಿಗಳಲ್ಲೇಕೆ ನಡೆಯಬಾರದು ? ಹಳ್ಳಿಯಿಂದ ತಾನೇ ದಿಲ್ಲಿ ? ಎಂಬ ಸಮತಾವಾದವ ಅರಿವು ನಮ್ಮ ಹಳ್ಳಿಯ ಪ್ರಜೆಗಳಲ್ಲಿ ಮೂಡ ತೊಡಗಿದ ಪರಿಣಾಮವಾಗಿ ನಮ್ಮ ಹಳ್ಳಿಯಲ್ಲೂ ಒಂದು ಐತಿಹಾಸಿಕ ಕವಿ ಸಮ್ಮೇಳನ ಜರುಗುವಂತಾಯಿತು. ನಮ್ಮ ಹಳ್ಳಿಯೆಂದರೆ ಸಿನಿಮಾಗಳಲ್ಲಿ ತೋರಿಸುವ ಸ್ವತಂತ್ರ ಭಾರತದ ಮಾಡೆಲ್ ಹಳ್ಳಿಯ ಹಾಗಿರದೆ ಹಳ್ಳಿಯವರ ಹೃದಯ ಪೇಟೆಯವರ ತಲೆ ಎರಡನ್ನೂ ಹೊಂದಿದ ಜನರನೇಕರು ನಮ್ಮೂರಲ್ಲಿರುವವರಿಂದ ಶಾಲೆ ಕಾಲೇಜು, ಪೋಸ್ಟಾಫೀಸು ಮೊದಲಾದ ನಾಗರಿಕ ಅವಶ್ಯಕತೆಗಳನ್ನೆಲ್ಲ ಬಹಳ ಹಿಂದೆಯೇ ಪೂರೈಸಿಕೊಂಡಿದೆ. ಆದರೆ ಸಾಹಿತ್ಯ ಸಂಬಂಧವಾದ ಕರ್ನಾಟಕ ಸಂಘ, ಸಾಹಿತ್ಯ ಸಂಘಗಳು ಮಾತ್ರ ಇತ್ತೀಚೆಗೆ ತಲೆ ಎತ್ತಿದವು. ಕಾರಣ ತೀರ ಇತ್ತೀಚಿನ ತನಕವೂ ನಮ್ಮೂರಲ್ಲಿ 'ಸಾಹಿತಿಗಳು' ಎಂಬ ಜನಾಂಗದವರು ಇರಲೇ ಇಲ್ಲ.

ಈಗೊಂದು 8–10 ವರ್ಷಗಳ ಹಿಂದೆ ನಮ್ಮೂರ ಹೈಸ್ಕೂಲಿಗೆ ಬಂದ ಪುರಂಧರ ಮಾಸ್ತರರೊಂದಿಗೆ ಈ ಸಾಹಿತ್ಯದ ಗಾಳಿ ನಮ್ಮೂರಿಗೂ ಹಾದು ಬಂತು. ಅವರು ತಮ್ಮ ವಿದ್ಯಾರ್ಥಿಗಳಿಗೆ "ಉಗಿ ಬಂಡಿಯು ತಾಸಿಗೆ 40 ಕಿಮೀ ಕ್ರಮಿಸುತ್ತದೆ ಯಾದರೆ......ಮೊದಲಾದವುಗಳನ್ನ ಕಲಿಸುವವರ ಜೊತೆಗೆ ಸಾಹಿತ್ಯ, ಕವಿ, ಪುಸ್ತಕ ಮೊದಲಾದ ಶಬ್ದಗಳನ್ನೂ ಅರೆದು ವಿದ್ಯಾರ್ಥಿಗಳ ತಲೆಯಲ್ಲಿ ಹುಯ್ಯ ತೊಡಗಿದರು. ಪರಿಣಾಮವಾಗಿ ಅವರ ವಿದ್ಯಾರ್ಥಿಗಳೇನಕರು ಸ್ಥಳೀಯ ಪತ್ರಿಕೆಗಳಾದ 'ಕಂಡದ್ದು ಕಂಡಂತೆ' 'ಜನತಾ ನಾಲಿಗೆ' ಮೊದಲಾದ ಪತ್ರಿಕೆಗಳಲ್ಲಿ ಕತೆ ಕವನ ಬರೆಯುವಷ್ಟು ತಯಾರಾದರು. ಕ್ರಮೇಣ ಈ ಜನಾಂಗ ಬೆಳೆಯುತ್ತ ಹೋಗಿ ನಮ್ಮ ಹಳ್ಳಿಯಲ್ಲೇ ಒಂದು ಕವಿ ಸಮ್ಮೇಳನ ಜರುಗಿಸಬೇಕೆಂಬ ನಿರ್ಣಯಕ್ಕೆ ಬರುವಷ್ಟಾಯಿತು.

ಪುರಂಧರ ಮಾಸ್ತರರ ಹಿಂದೆ ಉತ್ಸಾಹೀ ಯುವಕರ ಒಂದು ತಂಡವೇ ನಿಂತು ಸಿದ್ಧತೆಗಳನ್ನಾರಂಭಿಸಿತು. ಸಮ್ಮೇಳನಕ್ಕೆ ತಮ್ಮನ್ನೇ ಅಧ್ಯಕ್ಷರನ್ನಾಗಿಸುವಂತಿದ್ದರೆ ಅದಕ್ಕೆ ತಗುಲುವ ಹಣಕಾಸಿನ ವೆಚ್ಚದ ಭಾರವನ್ನು ತಾನು ಹೊರುವೆನೆಂದು ನಮ್ಮೂರಿನ ಮಾಜೀ ಛೇರ್ಮನ್ ಹಾಗೂ ಭಾವೀ ಎಮ್ಮೆಲ್ಲೆಗಳಾದ ಚಿಕ್ಕಣ್ಣನವರು

ಅಪ್ಪಗೆ ಕೊಡಿಸಿದ್ದರಿಂದ ಹಣದ ಅವಶ್ಯಕತೆ ಇದ್ದ ಸಮ್ಮೇಳನಾರ್ಥಿಗಳು ಒಪ್ಪಿಕೊಂಡಾಯಿತು. ಅತಿಥಿಗಳು ಯಾರು, ಏನೇನು ಕಾರ್ಯಕ್ರಮ ಮೊದಲಾದುದೆಲ್ಲ ಪುರಂಧರ ಮಾಸ್ತರರದೇ. ರಾಜ್ಯದ ಪ್ರಮುಖ ಕವಿಯೋರ್ವರನ್ನು ಕಂಡು ಒಪ್ಪಿಸಿ ಬಂದರು ಮಾಸ್ತರರು. ಅವರ ಓಡಾಟ ಪರದಾಟಗಳ ಫಲವಾಗಿ ಕಾರ್ಯಕ್ರಮ ಒಂದು ವ್ಯವಸ್ಥಿತ ರೂಪ ತಾಳಿ ದಿನ ಸಮಯ ಎಲ್ಲವೂ ನಿರ್ಧಾರವಾಯ್ತು.

ತುದಿಮನೆಯ ಸುಲೋಚನೆಗೆ 'ಜಯ ಭಾರತ ಜನನಿಯ ತನುಜಾತೆ'ಯನ್ನು ಸ್ವಾಗತ ಗೀತೆಯ ರೂಪದಲ್ಲಿ ಮೊದಲು ಹಾಡಬೇಕೆಂದೂ, ಒಬ್ಬನಿಗೆ ಕೊನೆಯಲ್ಲಿ ವಂದನಾರ್ಪಣೆ ಮಾಡಬೇಕೆಂದೂ ನಿರ್ದೇಶಿಸಿ ತಾವು ಕಾರ್ಯಕ್ರಮಗಳ ನಿರ್ವಹಣೆಯ ಭಾರ ಹೊತ್ತರು ಪುರಂಧರ ಮಾಸ್ತರರು. ಅತಿಥಿಗಳ ಎದುರಿನಲ್ಲಿ ಕವನ ವಾಚನ ನಡೆಯಬೇಕೆಂದೂ ಭಾಗವಹಿಸುವ ಕವಿಗಳೆಲ್ಲರ ಹೆಸರನ್ನೂ ತೆಗೆದುಕೊಂಡು ಚಪ್ಪರ ಮೈಕು ಎಲ್ಲ ಹೊಂದಿಸಲ್ಪಟ್ಟು ಆ ದಿನ ಬಂದೇ ಬಂತು.

ಸಮ್ಮೇಳನದ ದಿನ ಎಲ್ಲ ಸಿದ್ಧತೆ ಮುಗಿಸಿದ ಮಾಸ್ತರರು ಅತಿಥಿಗಳನ್ನು ಎದುರುಗೊಳ್ಳಲು ಊರಿನ ಪ್ರಮುಖರೊಡನೆ ರಸ್ತೆಯ ಬಳಿ ಬಂದು ಕಾಯುತ್ತಿದ್ದಾರೆ. ಅಷ್ಟರಲ್ಲಿ ಸ್ವಾಗತ ಗೀತೆ ಹಾಡಲೆಂದು ಮೊದಲನೆ ಬಾರಿಗೆ ಸೀರೆಯುಟ್ಟು ಗಂಟಿಗೆ ದಂಡೆ ಮುಡಿದು ತಯಾರುಮಾಡಲ್ಪಟ್ಟ ತುದಿಮನೆ ಸುಲೋಚನ ಮುಖ ಚಿಕ್ಕದು ಮಾಡಿಕೊಂಡು ಹಿಂದಿನಿಂದ ಬಂದು 'ಸರ್' ಎಂದಳು. ಈಗಿನ್ನೇನಂತದು ಬಂತಪ್ಪ ಎಂದುಕೊಂಡ ಮಾಸ್ತರರು 'ಏನಮ್ಮ' ಎಂದು ಕೇಳಿದಾಗ "ನೀವು ಬರೆದು ಕೊಟ್ಟ ಸ್ವಾಗತಗೀತೆ ಕಳೆದುಹೋಗಿವೆ ಸರ್, ಕಂಠಪಾಠ ಮಾಡಿಕೊಳ್ಳಲೆಂದು ಬಚ್ಚಲು ಮನೆಯಲ್ಲಿ ಇಟ್ಟಿದ್ದೆ, ನನ್ನ ತಮ್ಮ ಒಲೆಗೆ ಹಾಕ್ಬಿಟ್ಟ. ಎನ್ನಬೇಕೇ ? ಮಾಸ್ತರರಿಗೂ ಆ ಹಾಡು ಬಾಯಿಗೆ ಬರುತ್ತಿಲ್ಲ. ಹೋಗಿ ಹುಡುಕಿ ತೆಗೆದು ಕೊಡಲು ಸಮಯವಿಲ್ಲ. ಅತಿಥಿಗಳು ಬರುವ ಸಮಯವಾಗಿ ಬಿಟ್ಟಿದೆ. ಸ್ವಾಗತ ಗೀತೆಯಿಲ್ಲದೆ ಸಮಾರಂಭ ಶುರುವಾಗುವಂತಿಲ್ಲ. "ತಗೊಳಮ್ಮಾ ಈ ಕನ್ನಡ ಕಪಾಟಿನ ಕೀಲಿ ಬೇಂದ್ರೆ ಕುವೆಂಪು ವೀಸಿ ಮೊದಲಾದವರ ಭಾವಗೀತೆಗಳ ಪುಸ್ತಕ ದಲ್ಲಿಂದ ಯಾವುದಾದರೊಂದು ಒಳ್ಳೆ ಹಾಡು ತೆಗೆದುಕೊಂಡು ಹಾಡಿಬಿಡಮ್ಮ, ಬಡತನ, ಪ್ರೇಮ ಮೊದಲಾದುವರ ಮೇಲೆ ಇಲ್ಲದಿದ್ದರಾಯ್ತು ಹಾಳೆ ಹಿಡಿದು ಹಾಡಿದರೂ ಅಡಿ ಇಲ್ಲ" ಎಂದರು ಗಡಿಬಿಡಿಯಲ್ಲಿದ್ದ ಮಾಸ್ತರರು. 'ಆಯ್ತು ಸಾರ್' ಎಂದವಳೇ ಲೈಬ್ರರಿಗೆ ಹೋಗಿ ಭಾವಗೀತೆಯೊಂದನ್ನು ಆರಿಸಿ ಬರೆದು ಕೊಂಡಳು.

ಅತಿಥಿಗಳು ಬಂದಿಳಿದರು. ಚಪ್ಪರದ ತುಂಬ ಜನ ಸೇರಿದ್ದರು. ಅಧ್ಯಕ್ಷ, ಅತಿಥಿಗಳನ್ನೆಲ್ಲ ವೇದಿಕೆಯ ಮೇಲೆ ಕರೆತರಲಾಯಿತು. ಅಧ್ಯಕ್ಷರು ಕಾರ್ಯಕ್ರಮದ

ಪಟ್ಟಿ ನೋಡಿ 'ಸ್ವಾಗತಗೀತೆ' ಎಂದರು. ಮಾಸ್ತರರು. ಹಾಳೆ ಹಿಡಿದು ಕುಳಿತಿದ್ದ ಸುಲೋಚನಳತ್ತ ಸನ್ನೆ ಮಾಡಿದ ಕೂಡಲೇ ಸುಲೋಚನ ಮೈಕಿನ ಬಳಿ ನಿಂತು ಕೆಮ್ಮಿಕೊಂಡಳು. ಮಾಸ್ತರರಿಗೆ ಯಾವ ಹಾಡು ಬರೆದುಕೊಂಡಿದ್ದಾಳೋ ಎಂಬ ಆತಂಕ. ಸರಿ ಶುರು ಮಾಡಿದಳು.

"ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನ
ನಿಮ್ಮ ಮುಡಿಯೊಳಗಿಡಲು ಕಾದಿರುವೆವೂ
ಕೊಳ್ಳಿರೀ ಮಗವನ್ನ ಎಮ್ಮ ಮನೆ ಬೆಳಕನ್ನ
ನಿಮ್ಮ ಮನೆಯನು ತುಂಬ ಒಪ್ಪಿಸಿಹೆವೂ.......

ಅವರಮ್ಮ ಮದುವೆಯಲ್ಲಿ ಆಗಾಗ ಹಾಡುತ್ತಿರುವ ಹಾಡಾಗಿದ್ದರಿಂದ ಸುಲೋಚನ ಸುಲಲಿತವಾಗಿ ಹಾಡುತ್ತಿದ್ದಳು. ಅತಿಥಿಗಳು ಮಾಸ್ತರರ ಕಡೆ ನೋಡಿದರು! ಮಾಸ್ತರರು ನೆಲದ ಕಡೆ ನೋಡಿದರು !!

ಸಭೆಯಲ್ಲಿದ್ದ ನಾರೀ ಸಮೂಹ ತಂತಮ್ಮ ಹೆಣ್ಣು ಮಕ್ಕಳ ಮದುವೆಯನ್ನು ನೆನಪು ಮಾಡಿಕೊಂಡು ಭಾವ ಪರವಶವಾಗತೊಡಗಿತ್ತು. ಸುಲೋಚನ ಮಾತ್ರ ಯಾವ ಪರಿವೆಯೂ ಇಲ್ಲದೇ ಹಾಡು ಪೂರ್ತಿ ಮುಗಿಸಿ ಹೋಗಿ ಕುಳಿತಳು. ಹಾಡು ಯಾವುದಾದರೇನಂತೆ ಸಮಾರಂಭ ಭಾವಗೀತೆಯೊಂದರಿಂದ ಪ್ರಾರಂಭ ವಾಗಿದ್ದಂತೂ ನಿಜ. ಮಾಸ್ತರರಿಂದ ಸ್ವಾಗತ ಭಾಷಣ ಎಂಬುದಾಗಿ ಮೊದಲು ನಿರ್ಧರಿತವಾಗಿತ್ತು. ಆದರೆ ಅಧ್ಯಕ್ಷತೆ ವಹಿಸಿದ್ದ ಮಾಜೀ ಛೇರ್ಮನ್ ಹಾಗೂ ಭಾವೀ ಎಮ್ಮೆಲ್ಲೆಗಳಿಗೆ ಏನನ್ನಿಸಿತೋ ಕಾರ್ಯಕ್ರಮ ಪಟ್ಟಿಯಲ್ಲಿ ಕೊನೆಯಲ್ಲಿದ್ದ ತನ್ನ ಭಾಷಣ ಮೊದಲೇ ಮಾಡಬೇಕೆಂಬ ತೀರ್ಮಾನಕ್ಕೆ ಬಂದರು. ಸಮಾರಂಭದ ಮೊದಲ ಭಾಷಣವೇ ತನ್ನದಾದರೆ ಹೆಚ್ಚು ಪ್ರಭಾವ ಬೀರಬಹುದೆಂಬ ಯೋಚನೆ ಬಂದಿದ್ದೇ ತಡ "ಮಾಸ್ತರರೇ ಆ ಮೊದಲನೇ ಸ್ವಾಗತ ಭಾಷಣಾನ್ನೇ ನಾನು ಮಾಡಿ ಬಿಡ್ತೀನೆ. ಆಮೇಲಿನ ನನ್ನದನ್ನು ನೀವು ಮಾಡುವಿರಂತೆ" ಎಂದು ಅತಿಥಿಗಳಿಗೆ ಕೇಳಿಸುವಂತೇ ಹೇಳಿದರು. ಈ ಸಲ ಮಾಸ್ತರರು ಅತಿಥಿಗಳತ್ತ ನೋಡಿದರು, ಅತಿಥಿಗಳು ಚಪ್ಪರ ನೋಡಿದರು. ವಿಧಿ ಇಲ್ಲ. ಅಧ್ಯಕ್ಷರ ಕೋಪಕ್ಕೆ ತುತ್ತಾಗುವಂತಿಲ್ಲ. ಯಾಕೆಂದರೆ ಸಮಾರಂಭ ನಡೆಯುತ್ತಿರುವುದೇ ಅವರ ಹಣ ದಿಂದಾಗಿ. ಮಾಸ್ತರರು ಮೈಕಿನ ಬಳಿ ನಿಂತು "ಈಗ ಅಧ್ಯಕ್ಷರಿಂದ ಸ್ವಾಗತ ಭಾಷಣ" ಎನ್ನುವಾಗ ಧ್ವನಿಯೆಲ್ಲ ಕಂಪಿಸುತ್ತಿತ್ತು. ಕಾಲು ನಡಗುತ್ತಿತ್ತು. ಹುಡುಗರಿಗೆಲ್ಲ ಆ ಪಾಟಿ ಧೈರ್ಯ ತುಂಬುವ ಮಾಸ್ತರರೇ ಸಭಾಕಂಪದಿಂದ ನಡುಗು ತ್ತಿದ್ದಾರೆಂಬ ಆಶ್ಚರ್ಯಕರ ಸುದ್ದಿ ಸಭಿಕರಲ್ಲಿ ಹಬ್ಬಿಹೋಯಿತು. ಸರಿ ಮಾಡುವು

ದೇನು. 'ಅಧ್ಯಕ್ಷರಿಂದ ಸ್ವಾಗತ ಭಾಷಣ' ಶುರುವಾಗಿಬಿಟ್ಟಿತು. ಮೊದಲು ಅಧ್ಯಕ್ಷರಾದ ತಮಗೆ ಸ್ವಾಗತ ಕೋರಿಕೊಂಡು ನಂತರ ಅತಿಥಿಗಳಿಗೆ ಕೋರಿ ಸರಸರನೇ ಎಲ್ಲರಿಗೂ ಕೋರಿ ಮುಗಿಸಿ ಬರಲಿರುವ ಚುನಾವಣೆಯಲ್ಲಿ ಸೀಟು ಸಿಕ್ಕಿರುವ ತನಗೆ ಊರ ಜನರ ಬೆಂಬಲ ಬೇಕೆಂದು ಕೇಳಿ ತನ್ನ ಚುನಾವಣಾ ಪ್ರಣಾಳಿಕೆಯ ಕುರಿತು ಅರ್ಧ ಗಂಟೆ ದೀರ್ಘ ಭಾಷಣ ಮಾಡಿದರು.

ನಂತರ ಕವಿಗೋಷ್ಠಿ ಪ್ರಾರಂಭ. ನಮ್ಮೂರಿನ ಪ್ರತಿಯೊಬ್ಬ ಮರಿ ಹಿರಿ ಕವಿಗಳಲ್ಲ ವೇದಿಕೆಗೆ ನುಗ್ಗಿದರು. ಮೊದಲು ಎದ್ದುಬಂದ ಯುವ ಕವಿಯನ್ನ 'ಉಗ್ರ ಕವಿ ವ್ಯಗ್ರ ಕವಿ' ಎಂದಲ್ಲ ಕರೆಯುಬಹುದೆಂದು ಆತ ಇಟ್ಟು ಬಂದ ಹೆಜ್ಜೆಗಳ ಗತ್ತೇ ಹೇಳುತ್ತಿತ್ತು. ಮೈಕಿನ ಬಳಿ ಬಂದು ಪ್ರಾರಂಭಿಸಿದ.

ಆರೆಂಟು ಬಾರಿ ಅಳಿಸಿ ಬರೆದಿದ್ದೇನೆ
ಖವಿಗೋಷ್ಠಿಗೆಂದು ಖವನವೊಂದನ್ನು
(ಎಸ್. ವಿ. ರಂಗಣ್ಣನವರ ದೂರದ ಸಂಬಂಧಿಗಳು
ಸಹ ನಮ್ಮೂರಲ್ಲಿ ಇಲ್ಲದಿರುವುದು ಪುಣ್ಯ)
ನೊಂಧವರ ಬೆಂಧವರ ಕುಧಿಧು ಕಳೆಗುಂಧಿಹರ
ನಾಲಿಗೆಯು ನಾನಾಗಿ ಬರೆದು ತಂದಿದ್ದೇನೆ.

ಎಂದು ಪೂರ್ಣ ಮಹಾಪ್ರಾಣನಾಗಿ ತನ್ನ 'ಖವನ'ವನ್ನು ಓದಿ ಮುಗಿಸಿ ಪರಾಕ್ರಮಿಯಂತೆ ಹೋಗಿ ಕುಳಿತ. ಎರಡನೇ ಕವಿ 'ಜನತಾ ನಾಲಿಗೆ' ಪತ್ರಿಕೆಯ ಸಂಪಾದಕರ ಮಗ. ನೈಜತೆಗೆ ಮತ್ತು ಸಹಜತೆಗೆ ಹೆಸರಾದ ಪತ್ರಿಕೆಯ ಸಂಪಾದಕನ ಕವನ ಹೀಗಿತ್ತು.

ಎಮ್ಮೆ ಕಳೆದಿದೆ

ಎಮ್ಮೆ ಕಳೆದಿದೆ ಒಂದು ಗಿಡ್ಡಕೋಡು
ಗುರುತಿಸಲು ಸುಲಭವಿದೆ ಎಲುಬುಗೂಡು
ಕರಿಬಣ್ಣ ಕಣ್ಣು ಬಿಳಿ ಕಿವಿ ಜೋಲುತಿಹುದು
ಕರು ಬಿಟ್ಟು ಹೋಗಿಹುದು ಹಲ್ಲು ನಾಲ್ಕಿಹುದು
ಹಸಿ ಹುಲ್ಲು ತಿಂದದಕೆ ರೂಢಿಯೇ ಇಲ್ಲ
ಒಣ ಹಿಂಡಿ ಕಂಡರದು ಬಿಡುವೆಮ್ಮೆ ಅಲ್ಲ
ಹರಿದ ಗೋಣೀಪಾಟು ಕುನ್ನಿ ಮರಿಯ ಬಾಲ

ಒಡೆದ ಪ್ಲಾಸ್ಟಿಕ್ ಬಕೇಟು ಅರಿವೆ ಪುಸ್ತಕ ಚೀಲ
ಏನಿರಲಿ ಎಲ್ಲವನು ತಿನ್ನುವನುಭವವುಂಟು
ನೀವಿಟ್ಟುಕೊಂಡರದು ನಿಮಗೇ ಬೀಳುವ ಗಂಟು.

ಕಂಡಿರೇ ಈ ತೆರನ ಎಮ್ಮೆಯೊಂದನ್ನು ?
ನೋಡಿ ದಯಮಾಡಿ ಈ ವಿಳಾಸವನ್ನ
ಬಹುಮಾನ ಇಟ್ಟಿಹೆವು ತಂದೊಪ್ಪಿಸಿದರೆ
ಕಾಯುತಿಹೆವುತ್ತರವ ಎಮ್ಮೆ ಕಂಡವರೆ.

ಹೀಗೆ ಅವನ ಸಹಜ ನಿರೂಪಣೆ ಮುಗಿದಿದ್ದೇ ತಡ ಚಪ್ಪರದ ತುದಿಯಿಂದ ದನಿಯೊಂದು ಕೇಳಿ ಬಂತು. "ಹೂಂ ಕಣಪ್ಪ ಒಂದು ಸೊರಟೆ ಎಮ್ಮೆ ನೀನು ಹೇಳಿದಂತಾದ್ದೇ ನಮ್ಮ ತೋಟದಲ್ಲಿ ಯಾಲಕ್ಕಿ ಹಿಂಡೆಲ್ಲ ಹಾಳು ಮಾಡ್ತಾ ಇತ್ತು; ಅಲ್ಲೇ ಮಣ್ಣು ಕುಣೇಲಿ ಕಟ್ಟಿಹಾಕಿದ್ದೀನಿ. ಬೇಕಾದ್ರೆ ಬಂದು ನೋಡಿಕೊಂಡು ಹೋಗು" ಹೀಗೆ ಜೋರಾಗಿ ಕೂಗುತ್ತಿದ್ದ ಬೂರ‍್ಯ. ಜನರಲ್ಲ ಹೋ ಎಂದು ನಕ್ಕರೂ ಸಹ ಜನತಾ ನಾಲಿಗೆಯ ಸಂಪಾದಕರ ಮಗ ಮಾತ್ರ ತನ್ನ ನೈಜ ನಿರೂಪಣಾ ಸಾಮರ್ಥ್ಯದ ಕುರಿತು ಬೀಗುತ್ತಿದ್ದ. ಅತಿಥಿಗಳು ಮಾಸ್ತರರೂ ಇಬ್ಬರೂ ಬೂರ‍್ಯನ ಕಡೆ ನೋಡುತ್ತಿದ್ದರು.

ಅಂತೂ ಕವಿಗೋಷ್ಠಿ ಮುಗಿದಾಗ ಊಟದ ವೇಳೆಯಾಗಿತ್ತು. ಈಗ ಅತಿಥಿಗಳ ಭಾಷಣ. ಹೆಂಗಸರಿಗೆಲ್ಲ ತಂಬಳಿಗೆ ಒಗ್ಗರಣೆ ಹಾಕಿಲ್ಲ, ದನಕಾಯೋ ಹುಡುಗನಿಗೆ ತಿಂಡಿ ಕಳಿಸಿಲ್ಲ. ಅಡಿಕೆ ಸುಲಿಯುವವರಿಗೆ ಚಾ ಮಾಡಿ ಕೊಟ್ಟಿಲ್ಲ. ಮೊದಲಾದ ಅಸಂಖ್ಯ ಗೃಹಕೃತ್ಯಗಳು ನೆನಪಾಗತೊಡಗಿದ್ದವು. ಆದರೂ ಎದ್ದು ಹೊರಡಲು ಅಳುಕು. ಕುಳಿತರು. ಅತಿಥಿಗಳಾದ ಕವಿ ಒಳ್ಳೆಯ ವಿದ್ವತ್ಪೂರ್ಣ ವಾಗ್ಮಿಗಳು. ಇಂತಹ ಹಳ್ಳಿಯೊಂದರಲ್ಲಿ ಕವಿ ಸಮ್ಮೇಳನವೊಂದನ್ನು ಸಂಘಟಿಸಿರುವದೇ ಸ್ತುತ್ಯಕೆಲಸ. ಅಪ್ಪ ತಪ್ಪುಗಳೆಲ್ಲ ಇಲ್ಲಿ ಗೌಣವೆಂದು ಸಹೃದಯತೆಯಿಂದ ಮಾತನಾಡತೊಡಗಿದರು. ಎರಡನೇ ಸಾಲಿನಲ್ಲಿ ಕುಳಿತ ಲಕ್ಷ್ಮಕ್ಕನಿಗೆ ಒಮ್ಮೆಲೆ ತಮ್ಮ ಮನೆಯ 'ಕೊಟ್ಟಿಗೆ ಚಾಕ್ರಿ ಹಾಗೇ ಇರುವಮ ನೆನಪಾಯ್ತು. ಚಕ್ಕನೆ ಎದ್ದು ನಿಂತಳು. ಪಕ್ಕದಲ್ಲಿ ಕುಳಿತಿದ್ದ ಸರಸ್ವತಕ್ಕ ಸೆರಗು ಜಗ್ಗಿ ಕೂಡಿಸಿದಳು. ಅವಳ ಮಗನದೇ ವಂದನಾರ್ಪಣೆ ಇತ್ತಾದ್ದರಿಂದ. ಅತಿಥಿಗಳ ಭಾಷಣ ಮುಂದುವರಿದಿತ್ತು. ಗ್ರಾಮೀಣ ಕವಿಗಳು ತಮ್ಮ ಸುತ್ತ ಇರುವ ಜನಪದ ಸತ್ವವನ್ನು ಹೆಚ್ಚುಹೆಚ್ಚು ಮೈಗೂಡಿಸಿಕೊಳ್ಳಬೇಕು ಎಂದು ಕರೆಯಿತ್ತರು. ಲಕ್ಷ್ಮಕ್ಕನಿಗೆ ಎರಡನೆ ಬಾರಿಗೆ ಕೊಟ್ಟಿಗೆ ಚಾಕ್ರಿಯ ನೆನಪಾಗಿತ್ತು, ಮತ್ತೆ ಚಕ್ಕನೆ ಎದ್ದು ನಿಂತಳು ಮತ್ತೆ

ಸರಸ್ವತಕ್ಕ ಸೆರಗು ಜಗ್ಗಿದಳು, ಅತಿಥಿಗಳಿಗೆ ಇದು ಆಗಿಂದಲೇ ಲಕ್ಷ್ಯಕ್ಕೆ ಹೋಗಿತ್ತು. "ಬಿಡಿರಮ್ಮಾ ಅವರನ್ನು ಹೋಗುತ್ತಾರಾದರೆ ಹೋಗಲಿ ಹಾಗೆ ಎಳೆದೆಳೆದು ಕೂಡಿಸ ಬೇಡಿ" ಎಂದು ಭಾಷಣದ ನಡುವೆ ನಗುತ್ತ ಹೇಳಿದರು. ಲಕ್ಷ್ಮಕ್ಕ ಸರಸ್ವತಕ್ಕ ಇಬ್ಬರೂ ತಲೆ ತಗ್ಗಿಸಿದರು. ಅತಿಥಿಗಳ ಭಾಷಣ ಮುಗಿದು ಸರಸ್ವತಕ್ಕನ ಮಗ ವಂದನಾರ್ಪಣೆ ಮಾಡಿದಾಗ ಸಮಾರಂಭದ ಬೆಳಗಿನ ಕಾರ್ಯಕ್ರಮಗಳು ಮುಗಿದು ಮಧ್ಯಾಹ್ನ ನಾಲ್ಕು ಘಂಟೆಗೆ ಬಹಿರಂಗ ಅಧಿವೇಶನ ಹಾಗೂ ಮನರಂಜನಾ ಕಾರ್ಯ ಕ್ರಮ ಎಂದು ಘೋಷಿಸಲ್ಪಟ್ಟ ಮೇಲೆ ಚಪ್ಪರ ತೆರವಾಯ್ತು.

ಮಧ್ಯಾಹ್ನ ನಾಲ್ಕು ಗಂಟೆಗೆ ಎಲ್ಲರೂ ಊಟ ಮುಗಿಸಿ ಎಲೆ ಅಡಿಕೆ ತಿನ್ನುತ್ತ ಬಂದು ಕುಳಿತರು. ಯಕ್ಷಗಾನ ಮೊದಲಾದ ದೀರ್ಘ ಮನರಂಜನೆಯನ್ನು ನೋಡಲು ತಮಗೆ ಸಮಯವಿಲ್ಲದುದರಿಂದ ಲಘು ಮನರಂಜನೆ ಆಗಿ ಹೋಗಲೆಂದು ಅತಿಥಿಗಳು ಅಗ್ರಹಿಸಿದರು, ಪೂಜೆ ಮಂಗಳಕಾರ್ಯ ಮೊದಲಾದವುಗಳ ಹಾಡನ್ನು ಹಾಡುವದರಲ್ಲಿ ಪ್ರವೀಣೆಯರಾದ ನಾಲ್ವರು ಮಹಿಳೆಯರನ್ನು ವೇದಿಕೆಯ ಮೇಲೆ ತರಲಾಯ್ತು. ನಾಲ್ವರೂ ಸೇರಿ ಹಾಡಲು ಪ್ರಾರಂಭಿಸಿದರು.

> "ಗಂಧಾಕ್ಷತೆ ತನ್ನಿ ಚೊಂಬೀಲುಪತಾವ ತನ್ನಿ
> ತೆಂಗೀನ ಕಾಯ ತೆಗತನ್ನಿ। ತೆಗತನ್ನಿ। ತೆಗತನ್ನಿ ನಮ್ಮೊಡೆಯರು
> ಗೋಪೂಜೆ ಮಾಡ್ವ ಸಮಯಾವಿ.

ಎಂದು ದೀಪಾವಳಿ ಧಾಟಿಯ ಹಾಡನ್ನೆತ್ತಿದ್ದೇ ತಡ ಪ್ರೇಕ್ಷಕ ನಾರೀ ಸಮೂಹದಲ್ಲಿ ವಿದ್ಯುತ್ಸಂಚಾರವಾದಂತಾಯ್ತು. ಅಭ್ಯಾಸ ಬಲದಿಂದ ಕೆಲವರು ದನಿ ಗೂಡಿಸಲು ಪ್ರಾರಂಭಿಸಿದರೆ ತಮಗೆ ಬಂದಿದ್ದ ಸಾಲುಗಳನ್ನು ತಿದ್ದಿಕೊಳ್ಳಲು ಹಲವರು ಪ್ರಾರಂಭಿ ಸಿದರು. ಹೀಗೆ ಚಪ್ಪರವೆಲ್ಲ ಹೆಂಗಳೆಯರ ಹಾಡಿನಿಂದ ತುಂಬಿ ಹೋಗಿ ಮಂಗಳ ಕಾರ್ಯವೊಂದರ ಕಳೆ ಬಂದು ಬಿಟ್ಟಿತು. ಈ ಕಳೆ ಎಷ್ಟರ ಮಟ್ಟಿಗೆ ಮುಂದು ವರಿಯಿತೆಂದರೆ ಮೈಕಿನ ಹಾಡು ಯಾವುದು ಪ್ರೇಕ್ಷಕರ ಹಾಡು ಯಾವುದು ಎಂದು ತಿಳಿಯದಾಗಿ ನಡುವೆ ಮಾಸ್ತರರು ಎದ್ದು ನಿಂತು ದಯವಿಟ್ಟು ಪ್ರೇಕ್ಷಕರು ದನಿ ಗೂಡಿಸುವದನ್ನು ನಿಲ್ಲಿಸಬೇಕು" ಎಂದು ವಿನಂತಿಸಿಕೊಂಡರೂ ಸದ್ದು ಮಾತ್ರ ಅಡಗ ಲಿಲ್ಲ. ಮಾಸ್ತರರು ಅತಿಥಿಗಳ ಮುಖವನ್ನು ಅತಿಥಿಗಳು ಮಾಸ್ತರರ ಮುಖವನ್ನು ನೋಡಿದರು.

ಮುಂದೆ ಬಹಿರಂಗ ಅಧಿವೇಶನವೆಂದು ಸಾರಲಾಯ್ತು. ಇಲ್ಲಿಯವರೆಗೆ ನಡೆದ ಕಾರ್ಯಕ್ರಮಗಳ ಕುರಿತು ಮುಂದೆ ನಡೆಸಬಹುದಾದ ಕವಿ ಸಮ್ಮೇಳನಗಳ ಕುರಿತು

ಏನಾದರೂ ಸಲಹೆ ಸೂಚನೆಗಳನ್ನು ಕೊಡುವವರಿದ್ದರೆ ಬಂದು ಕೊಡಬಹುದೆಂದು ಮಾಸ್ತರರು ಘೋಷಿಸಿದರು. ಯುವತಿ ಮಂಡಳದ ಕಾರ್ಯದರ್ಶಿನಿ ಶರಾವತಿ ಮಾತಾಡಲೆಂದು ಎದ್ದು ನಿಂತಾಗ ಎಲ್ಲರ ಬಾಯಲ್ಲೂ "ಭಾರೀ ಛಲೋ ಭಾಷಣ ಮಾಡ್ತಾಳಂತೆ, ಮೊನ್ನೆ ಇವಳಿಗೇ ಅಲ್ವಾ ಬಹುಮಾನ ಬಂದಿದ್ದು ಎಂಬ ಉದ್ಗಾರ ಗಳು ಕೇಳಿ ಬಂದವು. ವೇದಿಕೆಯ ಮೇಲೆ ಹೋದ ಶರಾವತಿ ತನ್ನ ದಿಟ್ಟ ಸ್ಟೈಲಿನಲ್ಲಿ ಭಾಷಣ ಪ್ರಾರಂಭಿಸಿಯೇ ಬಿಟ್ಟಳು.

"ಹೆಣ್ಣು ಹೆತ್ತ ತಾಯಿ ತಂದೆಯರೇ ಗಂಡು ಹತ್ತವರೇ ವರದಕ್ಷಿಣೆ ಎಂದ ಭೂತವನ್ನು ಹೊಡೆದೋಡಿಸಲು ಸಾಧ್ಯವೇ ಎಂದು ನಿಮ್ಮೊಡನೆ ನೇರವಾಗಿ ಕೇಳಲು ನಾನಿಲ್ಲಿ ಬಂದು ನಿಂತಿದ್ದೇನೆ. ಹೆಣ್ಣಿನ ತಾಯ್ತಂದೆಗಳ ರಕ್ತ ಹೀರಿ ಬೆಳೆಯುತ್ತಿರುವ ಈ ಗಂಡಿನವರೆಂಬ ಜಿಗಣೆಗಳನ್ನು ಹೊಸಕಿ ಹಾಕಲು ನಾವೆಲ್ಲ ಕಂಕಣ ಬದ್ಧರಾಗುವ ಕಾಲ ಬಂದಿದೆ. ವರದಕ್ಷಿಣೆ ಪಿಪಾಸುಗಳೇ ಹೆಣ್ಣು ಹೆತ್ತವರ ರಕ್ತ ಹಿರಲು ನಾಚಿಕೆಯಾಗುವದಿಲ್ಲವೇ ಎಂದು ಜೋರಾಗಿ ಕೇಳಿ ಅತ್ತಿತ್ತ ನೋಡತೊಡಗಿದಳು ಅತಿಥಿಗಳಿಗೆ ಗೊತ್ತಾಯಿತು ಗುದ್ದಲು ಮೇಜು ಹುಡುಕುತ್ತಿದ್ದಾಳೆಂದು. ಮುಸಿ ಮುಸಿ ನಗುತ್ತ ಮೈಕಿನ ಆಚೆಗಿರುವ ಟೇಬಲ್ಲಿನತ್ತ ಕೈ ತೋರಿಸಿದರು. ಶರಾವತಿ ಅಲ್ಲಿಗೆ ಹೋಗಿ ಜೊರಾಗಿ ಮೇಜು ಕುಟ್ಟಿ ಮತ್ತೆ ಮೈಕಿನ ಬಳಿ ಬಂದು ನಿಂತಳು [ಆಗ ಒಂದು ವಾರದ ಹಿಂದಷ್ಟೇ ಇದೇ ಭಾಷಣ ಮಾಡಿ ಮೇಜುಗುದ್ದಿ ಬಹು ಮಾನ ಗಿಟ್ಟಿಸಿಕೆವಂಡಿದ್ದ ಅವಳಿಗೆ ಮೇಜು ಗುದ್ದದಿರಲು ಸಾಧ್ಯವೇ ಇರಲಿಲ್ಲ] ಭಾಷಣ ಮುಗಿದಾಗ ದೀರ್ಘ ಕರತಾಡನೆ ಬಿತ್ತು ''ಅರೆರೆ ಶರಾವತಿ ಜೋರು ನೊಡೇ ಕೂಸು ಜಬ್ಬರದಸ್ತ ಭಾಷಣ ಮಾಡ್ತು ಬಿಡು'' ಎಂದು ಎಲ್ಲರೂ ಹೊಗಳ ತೊಡಗಿದ್ದರು. ಪುರಂಧರ ಮಾಸ್ತರರು ಮಾತ್ರ ಮುಖ ಕೆಳಗೆ ಹಾಕಿದ್ದರು. ಅತಿಥಿಗಳು ಮುಸಿ ಮುಸಿ ನಗುತ್ತಿದ್ದರು. ಜನ ಮಾತ್ರ ಶರವಾತಿ ಭಾಷಣ ದಷ್ಟು ಛಲೋ ಅತಿಥಿಗಳ ಭಾಷಣ ಸಹ ಇರಲಿಲ್ಲ ಎಂಬ ತೀರ್ಮಾನಕ್ಕೆ ಬಂದು ಎದ್ದು ಹೊರಟರು.

ಶುಭಾಶಯಗಳೊಂದಿಗೆ :—

ವೆರೈಟಿ ಫುಡ್ ಪ್ರಾಡಕ್ಟ್ಸ

ಉತ್ತಮ ದರ್ಜೆ ಬಿಸ್ಕತ್ತುಗಳ ತಯಾರಕರು



ಕಾರ್ಖಾನೆ : ನಂ. 55, ಬೊಮ್ಮಸಂದ್ರ ಇಂಡಸ್ಟ್ರಿಯಲ್
ಲೇಔಟ್, ಆನೇಕಲ್ ತಾಲ್ಲೂಕು
ಬೆಂಗಳೂರು ಜಿಲ್ಲೆ



—:ಶುಭಾಶಯಗಳೊಂದಿಗೆ:—

ದಿ ಸಂಡೂರ್ ಮ್ಯಾಂಗನೀಸ್ ಅಂಡ್ ಐರ್ನ್‌ಓರ್ಸ್ ಲಿಮಿಟೆಡ್

ರಿಜಿಸ್ಟರ್ ಮತ್ತು ಕಾರ್ಯ ನಿರ್ವಾಹಕ ಕಛೇರಿ

"ಲೋಹಾದ್ರಿ ಭವನ"

ಯಶವಂತ ನಗರ್–583 124 ಸಂಡೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ